ದಕ್ಷಿಣ ಕನ್ನಡ ಜಿಲ್ಲೆಯ ಮರಾಟಿ ನಾಯ್ಕ್ ಸಮುದಾಯದ ಔದ್ಯೋಗಿಕ ಚಲನೆ:ಒಂದು ಸಮಾಜಶಾಸ್ತ್ರೀಯ ಅಧ್ಯಯನ.

ಸಮಾಜಶಾಸ್ತ್ರ ವಿಷಯದಲ್ಲಿ ಪಿ.ಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂದೀಪ್ ಕುಮಾರ್ ಬಿ.ಕೆ
ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ.

ಸಂಶೋಧನಾ ಮಾರ್ಗದರ್ಶಕರು
ಡಾ. ಗೋವಿಂದರಾಜು ಬಿ.ಎಮ್.
ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199
ಕರ್ನಾಟಕ. 2020

ದಕ್ಷಿಣ ಕನ್ನಡ ಜಿಲ್ಲೆಯ ಮರಾಟಿ ನಾಯ್ಕ್ ಸಮುದಾಯದ ಔದ್ಯೋಗಿಕ ಚಲನೆ: ಒಂದು ಸಮಾಜಶಾಸ್ತ್ರೀಯ ಅಧ್ಯಯನ.

ಅಧ್ಯಾಯ	ಪರಿವಿಡಿ	ಪುಟ ಸಂಖ್ಯೆ
I	ಪೀಠಿಕೆ	1-9
II	ಸಂಶೋಧನಾ ವಿಧಾನ	10-12
III	ಸಾಹಿತ್ಯ ಪರಮಾರ್ಶೆ	13-14
IV	ದತ್ತಾಂಶ ವಿಶ್ಲೇಷಣೆ	14-30
V	ಉಪಸಂಹಾರ	31
	ಆಕರ ಗ್ರಂಥ	32-40

ದಕ್ಷಿಣ ಕನ್ನಡ ಜಿಲ್ಲೆಯ ಮರಾಟಿ ನಾಯ್ಕ್ ಸಮುದಾಯದ ಔದ್ಯೋಗಿಕ ಚಲನೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ.

ಪೀಠಿಕೆ:

ಭರತ ಖಂಡವು ಹಲವು ಭಾಷೆ, ಧರ್ಮ, ಜಾತಿ, ಜನಾಂಗ, ಸಂಸ್ಕೃತಿಯಿಂದ ಕೂಡಿರುವ ವೈವಿಧ್ಯತೆಯ ತವರೂರು. ಆದಿವಾಸೀ, ಬುಡಕಟ್ಟು ಸಮುದಾಯಗಳ ಬೀಡು ಎಂದೇ ಕರೆಯಬಹುದು. ಈ ಖಂಡದಲ್ಲಿ ಬಡವ, ಶ್ರೀಮಂತ, ಭೂಮಾಲಿಕ, ಕೂಲಿ ಕಾರ್ಮಿಕ, ಎಂಬೆಲ್ಲಾ ಹಲವಾರು ಗುಂಪುಗಳು ಇದ್ದು, ಪ್ರಪಂಚದಲ್ಲೇ ಅತೀ ಹೆಚ್ಚು ಆದಿವಾಸಿ ಜನ ಸಮೂಹವನ್ನು ಹೊಂದಿರುವ ಎರಡನೇ ದೊಡ್ಡ ರಾಷ್ಟ್ರವೆನಿಸಿಕೊಂಡಿದೆ. ೨೦೧೧ ರ ಜನಗಣತಿಯ ಪ್ರಕಾರ ಸರಿಸುಮಾರು ೧೦೪,೨೮೧,೦೩೪ ರಷ್ಟು ಆದಿವಾಸಿಗಳ ಜನಸಂಖ್ಯೆ ಭಾರತದಲ್ಲಿ ಕಂಡು ಬಂದಿದೆ. ಆದಿವಾಸಿ ಜನಸಂಖ್ಯೆಯು ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ ೮.೬ ರಷ್ಟಿದೆ. ಈ ಎಲ್ಲಾ ಆದಿವಾಸಿ ಸಮುದಾಯಗಳು ಭಾರತದ ಉದ್ದಗಲಕ್ಕೂ ಹಂಚಿ ಹೋಗಿವೆ. ಪ್ರತಿಯೊಂದು ಆದಿವಾಸಿ ಸಮುದಾಯವು ಭೌಗೋಳಿಕತೆಗೆ ಹೊಂದಿಕೊಂಡು ಆರ್ಥಿಕ–ಸಾಮಾಜಿಕ ಬದುಕನ್ನು ಕಟ್ಟಿಕೊಂಡಿರುವುದನ್ನು ಕಾಣಬಹುದು. ಇಷ್ಟೇಲ್ಲಾ ವೈವಿದ್ಯತೆ ಇದ್ದರೂ ಕೂಡ ಈ ಎಲ್ಲಾ ಆದಿವಾಸಿಗಳಲ್ಲಿ ಸಾಮ್ಯತೆಯನ್ನು ಕಾಣಬಹುದು.

ಭರತ ಖಂಡದಲ್ಲಿರುವ ಆದಿವಾಸಿ ಸಮುದಾಯಗಳನ್ನು ಪ್ರದೇಶಕ್ಕೆ ಅನುಗುಣವಾಗಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕರ್ನಾಟಕ ರಾಜ್ಯ ಒಂದರಲ್ಲೇ ಸರಿಸುಮಾರು 51 ಬುಡಕಟ್ಟು ಸಮುದಾಯಗಳಿದ್ದು, ಅವುಗಳನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಿಸುಮಾರು ಮೂರು ಪ್ರಮುಖ ಬುಡಕಟ್ಟು ಸಮುದಾಯಗಳನ್ನು ಸಂವಿಧಾನದಲ್ಲಿ ಗುರುತಿಸಿದ್ದು, ಅವುಗಳಲ್ಲಿ ಮರಾಟಿ ನಾಯ್ಕ್ ಸಮುದಾಯ ಒಂದು ಪ್ರಮುಖವಾದ ಬುಡಕಟ್ಟು ಸಮುದಾಯವಾಗಿದೆ. ಪ್ರತಿಯೊಂದು ಬುಡಕಟ್ಟುಗಳು ತಮ್ಮ ಭೌಗೋಳಿಕತೆಗೆ ಅನುಗುಣವಾಗಿ ಭಾಷೆ, ಉದ್ಯೋಗ, ಊಟ ಉಪಚಾರಗಳೊಂದಿಗೆ ಜೀವನ ಸಾಗಿಸುತ್ತಿರುವುದನ್ನು ಕಾಣಬಹುದು. ಇವುಗಳಲ್ಲಿ ಕೆಲವು ಸಮುದಾಯಗಳು ಇನ್ನೂ ಕಾಡಿನಲ್ಲೇ, ಕಾಡನ್ನೇ ನಂಬಿಕೊಂಡು ಜೀವನ ನಡೆಸುತ್ತಿದ್ದರೆ, ಇನ್ನೂ ಕೆಲವು ಬುಡಕಟ್ಟು ಸಮುದಾಯಗಳು ಕಾಡನ್ನು ತೊರೆದು ಗ್ರಾಮ, ನಗರ ಪ್ರದೇಶಗಳಿಗೆ ವಲಸೆ ಬಂದು ಅಲ್ಲಿನ ಜನಜೀವನಕ್ಕೆ ಹೊಂದಿಕೊಂಡು ಜೀವನ ಸಾಗಿಸುತ್ತಿರುವಂತ ವಿಚಾರವನ್ನು ಕಾಣಬಹುದು.

ಬುಡಕಟ್ಟು ಶಬ್ದದ ಪರಿಕಲ್ಪನೆಯ ಅರ್ಥ ಮತ್ತು ಪ್ರಾಮುಖ್ಯತೆ:

ಪ್ರಸ್ತುತ ಅಧ್ಯಯನವು ಬುಡಕಟ್ಟು ಸಮಾಜದ ಅಧ್ಯಯನವಾಗಿರುವುದರಿಂದ ಬುಡಕಟ್ಟಿನ ಪರಿಕಲ್ಪನೆಯನ್ನು ಪರಿಶೀಲಿಸುವುದು, ಅರ್ಥೈಸಿಕ್ಕೊಳ್ಳುವುದು ಅತೀ ಅಗತ್ಯತೆಯಾಗಿದೆ. ಸಾಮಾನ್ಯವಾದ ಭಾಷೆಯಲ್ಲಿ ಹೇಳುವುದಾದರೆ ಇಂಗ್ಲಿಷ್ ಭಾಷೆಯ ಟ್ರೈಬ್ ಎನ್ನುವ ಪದವನ್ನು ಬುಡಕಟ್ಟು ಎಂಬುದಾಗಿ

ಕನ್ನಡೀಕರಿಸಲಾಗಿದೆ. ಇದು ಮೂಲತ ಇಟಾಲಿಯನ್ ಭಾಷೆಯ ಪದವಾಗಿದ್ದು ಪುರಾತನ ರೋಮ್ ನ ಮೂರು ರಾಜಕೀಯ ಬಣಗಳಲ್ಲಿ ಒಂದನ್ನು ಸೂಚಿಸುತ್ತಿತ್ತು. ಕಾಲ ಕ್ರಮೇಣ ಈ ಬಣಗಳ ಸಂಖ್ಯೆ 30 ಮತ್ತು 35 ಕ್ಕೆ ಏರಿದ ಮೇಲೆ ಮೂಲ ಪದ ಒಂದು ರಾಜಕೀಯ ಗುಂಪನ್ನು ಸೂಚಿಸುವ ಪದವಾಯಿತು. ಪಾಶ್ಚಿಮಾತ್ಯ ಸಮಾಜದ ಕೆಲವು ಭಾಗಗಳಲ್ಲಿ ಒಂದು ಕುಟುಂಬ ಅಥವಾ ಸಮುದಾಯಕ್ಕೆ ನೀಡಲಾದ ಭೂ ಪ್ರದೇಶವನ್ನು ಸೂಚಿಸಲು ಈ ಪದವನ್ನು ಬಳಕೆ ಮಾಡಲಾಯಿತು. ಆಕ್ಸ್ ಪರ್ಡ್ ನಿಘಂಟಿನ ಪ್ರಕಾರ ಟ್ರೈಬ್ ಎಂಬುದು ಒಂದು ಜನಾಂಗಕ್ಕೆ ಅದರಲ್ಲೂ ನಾಗರೀಕತೆಯ ಪ್ರಾಥಮಿಕ ಹಂತದಲ್ಲಿದ್ದು ಓರ್ವ ಮುಖಂಡನ ಆಳ್ವಿಕೆಗೆ ಒಳಪಟ್ಟ ಜನ ಸಮುದಾಯವನ್ನು ಸೂಚಿಸುತ್ತದೆ. ಕೆಲವು ಅಧ್ಯಯನಗಳು ಹೇಳುವ ಪ್ರಕಾರ ಟ್ರೈಬ್ ಎಂಬ ಪದವು ಲ್ಯಾಟಿನ್ ಮೂಲವನ್ನು ಹೊಂದಿರುವ ಇಂಗ್ಲಿಷ್ ಪದವಾದ ಟ್ರಿಬುಜ್ ಎಂಬ ಪದದಿಂದ ಉತ್ಪತ್ತಿ ಹೊಂದಿದೆ. ಐರಿಸ್ ಇತಿಹಾಸದಲ್ಲಿ ಕುಟುಂಬಗಳನ್ನು ಸೂಚಿಸಲು ಅಥವಾ ಒಂದೇ ಉಪನಾಮವನ್ನು ಹೊಂದಿರುವ ಸಮುದಾಯಗಳನ್ನು ಸೂಚಿಸಲು ಈ ಶಬ್ದವನ್ನು ಬಳಸಲಾಗುತ್ತಿತ್ತು.

ಇದಕ್ಕೆ ಪೂರಕವಾಗಿ ಹೇಳುವುದಾದರೆ ***ರಾಲ್ಫ್ ಲಿಂಟನ್*** ಎಂಬುವವನು ಟ್ರೈಬ್ ನ್ನು ಈ ರೀತಿ ವ್ಯಾಖ್ಯಾನಿಸುತ್ತಾರೆ, ಟ್ರೈಬ್ ಎಂಬುದು ಹತ್ತಿರದಲ್ಲಿರುವ ಹಲವು ಭೂ ಪ್ರದೇಶವನ್ನು ಹೊಂದಿರುವ, ಮತ್ತು ಒಂದೇ ಆಸಕ್ತಿಯನ್ನು ಹೊಂದಿರುವಂತಹ ಸಾಂಸ್ಕೃತಿಕ ವಿಚಾರಗಳಲ್ಲಿ ಹತ್ತಿರದ ಭಾಂದವ್ಯವನ್ನು ಹೊಂದಿರುವ, ಹಲವು ಸಾಮ್ಯತೆಗಳಿರುವ ವಿಚಾರದಲ್ಲಿ ಏಕತೆಯನ್ನು ಹೊಂದಿರುವ ಒಂದು ಸಮೂಹವಾಗಿದೆ. (ಕುಮಾರ್ 2002), 1957 ರಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ ಯ ಸಮ್ಮೇಳನದಲ್ಲಿ ಟ್ರೈಬ್ ಅನ್ನು ಈ ರೀತಿಯಲ್ಲಿ ಸಂಭೋಧಿಸಲಾಯಿತು "ಸ್ವತಂತ್ರ ರಾಷ್ಟ್ರದಲ್ಲಿ ಕಂಡುಬರುವ ಸಾಮಾಜಿಕವಾಗಿ ಮತ್ತು ಆರ್ಥಿಕ ವಾಗಿ ವಂಚನೆಗೊಳಗಾದ ತನ್ನದೇ ಆದ ಪದ್ದತಿ ಆಚಾರ-ವಿಚಾರಗಳನ್ನು ಹೊಂದಿರುವ ಮತ್ತು ಅವರದ್ದೇ ಆದ ಸಾಂಪ್ರದಾಯಿಕ ಕಾನೂನನ್ನು ಹೊಂದಿರುವ ಗುಂಪು ಅಥವಾ ಸಮೂಹವಾಗಿದೆ."

ಇಂಪೀರಿಯಲ್ ಗೆಝೆಟಿಯರ್ ಆಫ್ ಇಂಡಿಯಾ ದ ಪ್ರಕಾರ "ಟ್ರೈಬ್ ಎಂಬುದು ಸಾಮಾನ್ಯ ನಾಮದೇಯವನ್ನು ಹೊಂದಿರುವ,ಸಾಮಾನ್ಯ ಆಡು ಭಾಷೆಯನ್ನು ಹೊಂದಿರುವ ,ಸಾಮಾನ್ಯ ಭೂ ಪ್ರದೇಶವನ್ನು ಹೊಂದಿದ್ದು ,ಅಥವಾ ಅದನ್ನು ಪಡೆಯಲು ಪ್ರಯತ್ನಿಸುತ್ತಿರುವ ,ಹೊರಭಾಂಧವ್ಯ ವಿವಾಹ ವ್ಯವಸ್ಥೆಯನ್ನು ಹೊಂದಿರದೇ ಇರುವಂತಹ ಕುಟುಂಬಗಳ ಸಂಗ್ರಹವಾಗಿದೆ." (ಶರ್ಮಾ ಕೆ.ಎಲ್.1997:145)

ಈ ದೃಷ್ಟಿಯಲ್ಲಿ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯಗಳು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರೂ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಹಳಷ್ಟು ಬದಲಾವಣೆಯಾಗಿರುವುದನ್ನು ನೋಡಬಹುದು. ಇದೇ ರೀತಿಯ ಬದಲಾವಣೆ ಭಾರತ ದೇಶದಲ್ಲಿ ಇರುವ ಎಲ್ಲಾ ಬುಡಕಟ್ಟು ಸಮುದಾಯಗಳ ಮೇಲೂ ಪರಿಣಾಮ ಬೀರಿದೆ ಎಂಬುದಾಗಿ ಹೇಳಬಹುದು. ಉದಾಹರಣೆಗೆ ಸಂಪೂರ್ಣ ಅನಕ್ಷರಸ್ಥರಾಗಿದ್ದ ಬುಡಕಟ್ಟುಗಳು ಉನ್ನತ, ಅತ್ಯುನ್ನತ ಶಿಕ್ಷಣವನ್ನು

ಪಡೆಯುತ್ತಿರುವ, ಡಾಕ್ಟರ್, ಇಂಜಿನಿಯರ್ ಮುಂತಾದ ವೃತ್ತಿಯಾದಾರಿತ ಶಿಕ್ಷಣವನ್ನು ಪಡೆದು ಸಮಾಜದಲ್ಲಿ ಅತ್ಯುನ್ನತ ಸ್ಥಾನಮಾನದಲ್ಲಿ ಇದ್ದಿರುವುದು ಕಂಡು ಬರುತ್ತದೆ. ಅಷ್ಟೇ ಅಲ್ಲ ಭಾರತದಲ್ಲಿ ಉನ್ನತ ಶ್ರೇಣಿಯ ಪರೀಕ್ಷೆಗಳಾದಂತ ಐ.ಎ.ಎಸ್. ಐ.ಪಿ.ಎಸ್, ಕೆ.ಎ.ಎಸ್ ಮುಂತಾದಂತ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಹುದ್ದೆ ಅಲಂಕರಿಸಿರುವುದು ಕೂಡ ಕಂಡು ಬರುತ್ತದೆ. ರಾಜಕೀಯ ಚುಕ್ಕಾಣಿ ಹಿಡಿದಿರುವ ಅದೆಷ್ಟೋ ಬುಡಕಟ್ಟುಗಳ ನಾಯಕರನ್ನೂ ನಾವು ಕಾಣಬಹುದು. ಇದಕ್ಕೆಲ್ಲ ಮೂಲ ಕಾರಣ ಭಾರತ ಸರ್ಕಾರ ಹಮ್ಮಿಕೊಂಡಿರುವಂತ ಕಾರ್ಯಕ್ರಮಗಳು, ಸಂವಿಧಾನ ನೀಡಿರುವ ವಿಶೇಷ ಸವಲತ್ತುಗಳು.

ಇಷ್ಟೆಲ್ಲ ಸವಲತ್ತುಗಳು ಇದ್ದರೂ ಭಾರತದಲ್ಲಿ ವಾಸವಾಗಿರುವ ಎಲ್ಲಾ ಬುಡಕಟ್ಟು ಸಮುದಾಯಗಳು ಇನ್ನೂ ಮೂಲಭೂತ ಸವಲತ್ತುಗಳಾದಂತ ವಾಸಿಸಲು ಮನೆ, ಕುಡಿಯಲು ನೀರು, ಪೌಷ್ಟಿಕ ಅಹಾರ, ಹೆರಿಗೆ, ಬಾಣಂತನದದಂತ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಔಷದಿಗಳು ಇಲ್ಲದೆ ರೋಗ ರುಜಿನಗಳಿಂದ ಸಾಯುತ್ತಿರುವುದು, ಬಡತನದಿಂದ ಬಳಲುತ್ತಿರುವುದು, ಮಕ್ಕಳಿದ್ದರೆ ಶಾಲೆಯೇ ಇಲ್ಲದಿರುವುದು, ಶಾಲೆ-ಮಕ್ಕಳು ಇದ್ದರೆ ಉತ್ತಮ ಟೀಚರೇ ಇಲ್ಲದಿರುವುದು, ಆಸ್ಪತ್ರೆ ಇದ್ದರೆ ವೈದ್ಯರೆ ಇಲ್ಲದಿರುವುದು, ವೈದ್ಯ-ಆಸ್ಪತ್ರೆ ಇದ್ದರೂ ಬುಡಕಟ್ಟು ಸಮುದಾಯದವರನ್ನು ನೋಡುವ, ಉಪಚರಿಸುವ ಮನಸ್ಥಿತಿಯೇ ಇಲ್ಲದ ವೈದ್ಯರಿಲ್ಲದಿರುವುದರಿಂದ ಸಾವನ್ನಪ್ಪುವ ಮಕ್ಕಳ, ಗರ್ಬಿಣಿಯರ, ಮುದುಕರ ಸಂಖ್ಯೆ ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ, ಇಂತಹ ಸತ್ಯ ಸಂಗತಿಗಳು ಮಾತ್ರ ಬುಡಕಟ್ಟು ಸಮುದಾಯದವರ ಬದುಕಿನಲ್ಲಿ ಜೀವಂತವಾಗಿರುವುದನ್ನು ದಿನನಿತ್ಯ ವಾರ್ತಾ ಪತ್ರಿಕೆಗಳಲ್ಲಿ, ಟೀವಿಗಳಲ್ಲಿ ನೋಡುತ್ತಿದ್ದೇವೆ. ಇದೇ ರೀತಿಯ ಮಿಶ್ರ ಜೀವನ ಕ್ರಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯದ ಜನರಲ್ಲೂ ಕೂಡ ಕಂಡು ಬರುತ್ತದೆ.

ಸಾಮಾಜಿಕ ಚಲನೆ ಅಥವಾ ಸಂಚಲನೆ:

ಸಾಮಾಜಿಕ ಚಲನೆ ಎಂಬ ಪರಿಕಲ್ಪನೆ ಯು ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವು ಕಾಲಾಂತರದಲ್ಲಿ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಬದಲಾವಣೆಯಾಗುವುದನ್ನು ಸೂಚಿಸುತ್ತದೆ. ಸಾಮಾಜಿಕ ಚಲನೆಯು ಮೇಲ್ಮುಖ ಅಥವಾ ಕೆಳಮುಖ ಮತ್ತು ಅಂತರ್ ತಲೆಮಾರು ಅಥವಾ ಆಂತರಿಕ ತಲೆಮಾರು ಚಲನೆಯಾಗಿರಬಹುದು. ಸಾಮಾಜಿಕ ಚಲನೆಯನ್ನು ವಿವಿಧ ಅಂಶಗಳ ಆಧಾರದಲ್ಲಿ ವಿಶ್ಲೇಸಿಸಬಹುದು, ಶೈಕ್ಷಣಿಕ ಅಭಿವೃದ್ದಿ, ಔದ್ಯೋಗಿಕ ಚಲನೆ,ಆರ್ಥಿಕ ಅಭಿವೃದ್ದಿ, ಸಾಂಸ್ಕೃತಿಕ ಪ್ರಮಾಣಗಳ ಗುಣಮಟ್ಟ,ರಾಜಕೀಯ ಪ್ರಾತಿನಿದ್ಯ ಈ ರೀತಿಯ ಹಲವು ಸಾಮಾಜಿಕ ವಿಚಾರಗಳ ಆಧಾರದಲ್ಲಿ ಸಾಮಾಜಿಕ ಚಲನೆಯ ವಿಶ್ಲೇಷಣೆ ಸಾದ್ಯ.

ಸಾಮಾಜಿಕ ಚಲನೆಯ ವಿಚಾರದಲ್ಲಿ ಮೂರು ಮುಖ್ಯ ಆದಾರಗಳನ್ನು ಗುರುತಿಸಬೇಕಾಗುವುದು, ಅರ್ಹತೆ, ಸಮಾನತಾವಾದ ಮತ್ತು ಐತಿಹಾಸಿಕತೆ. ಯಾವ ವ್ಯಕ್ತಿಗಳು ಈ ಮೂರು ವಿಚಾರಗಳನ್ನು ಪಡೆಯುತ್ತಾರೆಯೋ

ಅವರುಗಳು ತಮ್ಮ ಸ್ಥಾನಮಾನವನ್ನು ಬದಲಿಸಬಹುದು ಮತ್ತು ಮೇಲ್ಮುಖ ಅಭಿವೃದ್ದಿಯನ್ನು ಸಾಧಿಸುತ್ತಾರೆ. ಎಲ್ಲಾ ವ್ಯಕ್ತಿಗಳಿಗೂ ಸಮಾನವಾದ ಅವಕಾಶಗಳು ಅಡೆತಡೆಗಳಿಲ್ಲದೆ ದೊರಕಿದಾಗ ಅವರು ಸಾಮಾಜಿಕವಾಗಿ ಮುಂದುವರಿಯಲು ಸಾದ್ಯ. ಮಾನವ ವಿಕಾಸದ ಇತಿಹಾಸವನ್ನು ಕೆದಕಿದಾಗ ಕಾಲಾಂತರದಲ್ಲಿಆರ್ಥಿಕ ಮತ್ತು ಜನಸಂಖ್ಯಾ ಅಂಶಗಳು ಸಮಾಜವನ್ನು, ಕುಟುಂಬ ವ್ಯವಸ್ಥೆಯನ್ನು, ಮತ್ತು ಮಾನವನನ್ನು ಸುವ್ಯವಸ್ಥಿತವಾಗಿ ಮರುಜೋಡಿಸಿದೆ.

ಸಾಮಾಜಿಕ ಚಲನೆಯನ್ನು ಕುಟುಂಬ ಅಥವಾ ವ್ಯಕ್ತಿಯ ಆಧಾರದಲ್ಲಿ ಮಾಪನ ಮಾಡಲು ಸಾದ್ಯವಿದೆ. ಕುಟುಂಬ ವ್ಯವಸ್ಥೆಯ ಆಧಾರದಲ್ಲಿ ಮಾಪನ ಮಾಡಿದಾಗ ಅಂತರ್ ತಲೆಮಾರು ಚಲನೆಯೂ, ವ್ಯಕ್ತಿಯ ಆಧಾರದಲ್ಲಿ ಆಂತರಿಕ ತಲೆಮಾರು ಚಲನೆಯೂ ಕಂಡುಬರುವುದು. ಕೆಳಮುಖ ಚಲನೆಯು ಹೆಚ್ಚಿನ ಪ್ರಮಾಣದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ.ಭಾರತದಲ್ಲಿ ಜಾತಿಯ ಚಲನೆಯು ಸಮುದಾಯದ ಅಥವಾ ಸ್ಥರ ಚಲನೆ ಎಂಬುದಾಗಿ ಸೂಚಿಸಲ್ಪಡುತ್ತದೆ. ಸಾಮಾಜಿಕ ಚಲನೆ ಯನ್ನು ಆ ಚಲನೆ ಯ ಪುನರಾವರ್ತನೆ, ಸ್ಥಿರತೆ ಮತ್ತು ಉನ್ನತಿ ಅಥವಾ ಅದರ ಎತ್ತರ ಈ ಅಂಶಗಳ ಆಧಾರದಲ್ಲಿ ಅಳತೆ ಮಾಡಬಹುದು. ಈ ವಿಚಾರಗಳ ಆಧಾರದಲ್ಲಿ ಅಳತೆಗೊಳಪಡಿಸಿದಾಗ ಆರ್ಥಿಕ, ಸಾಮಾಜಿಕ, ರಾಜಕೀಯ ಚಲನೆಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಔದ್ಯೋಗಿಕ ಚಲನೆ ಯು ಎಲ್ಲಾ ಸಮಾಜಗಳಲ್ಲೂ ಪ್ರಮುಖ ವಿಚಾರವಾಗಿ ಗೋಚರಿಸುವುದು. ಆದ್ದರಿಂದ ಇದರ ಅಳತೆಯು ಉದ್ಯೋಗಿಯು ಪಡೆಯುವ ಆದಾಯ, ನೈಪುಣ್ಯತೆ, ದಿಕ್ಕು ಯಾವ ಘನತೆ, ಸ್ತರ, ಕಛೇರಿ ಇವುಗಳನ್ನು ತಿಳಿಯುವ ಮೂಲಕ ಮಾಡಬಹುದು.

ಅಮೆರಿಕದ ಸಮಾಜಶಾಸ್ತ್ರಜ್ಞರಾದ ಪಿ.ಎ.ಸೊರೋಕಿನ್ 1928 ರ ತನ್ನ ಸೋಶಿಯಲ್ ಆಂಡ್ ಕಲ್ಚರಲ್ ಮೊಬಿಲಿಟಿ ಯಲ್ಲಿ ವಿವಿದ ಸಾಮಾಜಿಕ ಚಲನೆಗೆ ಸಂಬಂದಿಸಿದ ಪರಿಕಲ್ಪನೆಗಳನ್ನು ಪರಿಚಯಿಸುತ್ತಾರೆ. ಆತನ ಅಭಿಪ್ರಾಯದಂತೆ ಒಬ್ಬ ವ್ಯಕ್ತಿ ಅಥವಾ ಒಂದು ಸಾಮಾಜಿಕ ವಸ್ತು ಅಥವಾ ಮೌಲ್ಯ ದಲ್ಲಿ ಆಗುವ ಸ್ಥಾನಿಕ ಬದಲಾವಣೆ ಎಂಬುದಾಗಿ ಸಾಮಾಜಿಕ ಚಲನೆ ಯನ್ನು ಅರ್ಥೈಸಿಕೊಳ್ಳಬಹುದು. ಅಲ್ಲದೆ ಎರಡು ಪ್ರಮುಖ ವಿಧಗಳನ್ನು ಪ್ರಸ್ತುತ ಪಡಿಸುತ್ತಾರೆ. **ಮೊದಲನೆಯದಾಗಿ** ಸಮಾನಾಂತರ ಚಲನೆ ಮತ್ತು **ಎರಡನೆಯದಾಗಿ** ಲಂಬಾಂತರ ಚಲನೆ. ಸಮಾನಾಂತರ ಚಲನೆ ಎಂದರೆ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತು, ಒಂದು ಸಾಮಾಜಿಕ ಗುಂಪಿನಿಂದ, ಆ ಗುಂಪಿಗೆ ಸರಿ ಸಮಾನವಾದ ಸ್ಥಾನಮಾನವನ್ನು ಹೊಂದಿರುವ ಇನ್ನೊಂದು ಗುಂಪಿಗೆ ಬದಲಾವಣೆಗೊಳ್ಳುವುದು. ನೇರ ಅಥವಾ ಲಂಬ ಚಲನೆ ಎಂದರೆ ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವು ಒಂದು ಸಾಮಾಜಿಕ ಸ್ತರದಿಂದ ಆ ಸಾಮಾಜಿಕ ಸ್ತರಕ್ಕೆ ಮೇಲ್ಪಟ್ಟ ಅಥವಾ ಕೆಳಮಟ್ಟದ ಸ್ತರಕ್ಕೆ ತನ್ನ ಸ್ಥಾನಮಾನವನ್ನು ಬದಲಾಯಿಸಿಕೊಳ್ಳುವುದೇ ಆಗಿದೆ. ಇದನ್ನು ಸಾಮಾಜಿಕ ಏರಿಕೆ ಮತ್ತು ಸಾಮಾಜಿಕ ಇಳಿಕೆ ಎಂಬುದಾಗಿಯೂ ಸಂಭೋಧಿಸಲಾಗುತ್ತದೆ. ಸ್ಥರವ್ಯವಸ್ಥೆಯ ರಚನೆಗೆ ಅವಲಂಬಿಸಿದಂತೆ ಆರ್ಥಿಕ, ರಾಜಕೀಯ,

ಮತ್ತು ಔದ್ಯೋಗಿಕ ಚಲನೆಗಳಲ್ಲಿ ಈ ರೀತಿಯ ಏರಿಳಿತಗಳನ್ನು ಕಾಣಬಹುದು. ಇದನ್ನು ವ್ಯಕ್ತಿಯ ‘‘ಸಾಮಾಜಿಕ ಪ್ರಗತಿ’’ ಮತ್ತು ‘‘ಸಾಮಾಜಿಕ ಹಿನ್ನಡೆ’’ ಎಂಬುದಾಗಿಯೂ ಕರೆಯಬಹುದು.

ಅಂತರ್ ಮತ್ತು ಆಂತರಿಕ ಔದ್ಯೋಗಿಕ ಚಲನೆ:

ಸಮಾಜಶಾಸ್ತ್ರಜ್ಞ ಮಿಲ್ಲರ್ ಅವರ ಅಭಿಪ್ರಾಯದಂತೆ ಅಂತರ್ ತಲೆಮಾರು ಔದ್ಯೋಗಿಕ ಚಲನೆಯಲ್ಲಿ ತಂದೆಯಾದವನು ತನ್ನ ಮಗ ಅಥವಾ ಮಗಳ ಔದ್ಯೋಗಿಕ ಸ್ಥಾನ ಮಾನದ ಮೇಲೆ ಪ್ರಭಾವ ಬೀರಿದ್ದಾನೆಯೇ ಎಂದು ಪರೀಕ್ಷಿಸಬೇಕು. ಅಂತರ್ ತಲೆಮಾರು ಔದ್ಯೋಗಿಕ ಚಲನೆಯು ಒಬ್ಬ ವ್ಯಕ್ತಿಯು ತನ್ನ ಪೂರ್ವ ಪೀಳಿಗೆಯ ಜನರು (ಪೂರ್ವಜರು) ನಿರ್ವಹಿಸುತಿದ್ದ ಉದ್ಯೋಗಗಳಿಗೆ ಬದಲಾಗಿ ಹೊಸ ಉದ್ಯೋಗಕ್ಕೆ ಬದಲಾವಣೆಯನ್ನು ಹೊಂದುವುದನ್ನು ಸೂಚಿಸುವುದು.

ಆಂತರಿಕ ಪೀಳಿಗೆ ಔದ್ಯೋಗಿಕ ಚಲನೆಯು ಓರ್ವ ವ್ಯಕ್ತಿಯು ತನ್ನ ಜೀವನದ ಪೂರ್ವಘಟ್ಟದಲ್ಲಿ ನಿರ್ವಹಿಸುತಿದ್ದ ಉದ್ಯೋಗದ ಸ್ಥಾನಮಾನಕ್ಕಿಂತ ತದ ನಂತರದಲ್ಲಿ ಅದಕ್ಕೆ ಸರಿಸಮಾನವಾದ ಅಥವಾ ಆ ಉದ್ಯೋಗಕ್ಕೆ ವಿರುದ್ದವಾದ ಸ್ಥಾನಮಾನವನ್ನು ಹೊಂದಿರುವ ಉದ್ಯೋಗಕ್ಕೆ ಬದಲಾವಣೆಗೊಳ್ಳುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ಈ ಅಂತರ್ ತಲೆಮಾರು ಔದ್ಯೋಗಿಕ ಚಲನೆಯ ಕುರಿತಾಗಿ ಅಮೆರಿಕ ಮತ್ತು ಇತರ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಲವು ಗಣನೀಯ ಅಧ್ಯಯನಗಳು ನಡೆದಿವೆ.ಅಲ್ಲದೆ ಭಾರತದಲ್ಲೂ ಈ ಕುರಿತು ಜಲನ್ ಮತ್ತು ಮುರುಗೈ (2009) ಮತ್ತು ಮೈತ್ರ ಮತ್ತು ಶರ್ಮಾ(2009) ಇವರುಗಳ ಅಧ್ಯಯನಗಳು ಹೆಚ್ಚು ಬೆಳಕನ್ನು ಚೆಲ್ಲಿವೆ. ಆದರೆ ಇವರ ಅಧ್ಯಯನಗಳಲ್ಲಿ ಕೇವಲ ಶೈಕ್ಷಣಿಕ ಸಾಧನೆಯ ಕಡೆಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಈ ಅಧ್ಯಯನಗಳಿಗೂ ನನ್ನ ಅಧ್ಯಯನಕ್ಕೂ ಹೋಲಿಕೆಗಳಿದ್ದಾಗ್ಯೂ ಹಲವು ವ್ಯತ್ಯಾಸಗಳಿವೆ. ನನ್ನ ಅಧ್ಯಯನದಲ್ಲಿ ನಾನು ಶಿಕ್ಷಣದ ಸಾಧನೆಯ ಜತೆಗೆ ಉದ್ಯೋಗದ ಆಯ್ಕೆ, ಉದ್ಯೋಗದ ಸಾದನೆಗೆ ಅಡೆತಡೆಗಳು, ಆದಿವಾಸಿ ಸಂಸ್ಕೃತಿ ಮತ್ತು ಉದ್ಯೋಗದ ನಡುವಿನ ಸಂಬಂದ ಇವುಗಳ ಕುರಿತು ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ನನ್ನ ಅಧ್ಯಯನವು ಕೇವಲ ದಕ್ಷಿಣಕನ್ನಡ ದ ಆದಿವಾಸಿ ಸಮುದಾಯವಾದ ಮರಾಟಿ ನಾಯ್ಕ್ ಜನರ ಉದ್ಯೋಗಗಳಲ್ಲಿನ ಬದಲಾವಣೆಯ ಬಗ್ಗೆ ಸೀಮಿತವಾಗಿದೆ.ಆದ್ದರಿಂದ ಇತರ ಯಾವುದೇ ಅಧ್ಯಯನಗಳಿಗೆ ನಾನು ಪ್ರತಿಕ್ರಿಯಾಶೀಲನಲ್ಲ.ಮತ್ತು ಇತರ ಅಂತರ್ ತಲೆಮಾರು ಔದ್ಯೋಗಿಕ ಚಲನೆಯ ಅಧ್ಯಯನಕ್ಕಿಂತ ನನ್ನ ಔದ್ಯೋಗಿಕ ಚಲನೆಯ ಅಧ್ಯಯನವು ವಿಭಿನ್ನತೆಯಿಂದ ಕೂಡಿರುವುದು.

ಭಾರತೀಯ ಸಮಾಜದಲ್ಲಿ ಸಾಮಾಜಿಕ ಚಲನೆ:

ಭಾರತವು ಒಂದು ಜಾತಿಯಾದಾರಿತ ರಾಷ್ಟ್ರ. ಮಾನವನ ಬೆಳವಣಿಗೆಯ ಹೆಚ್ಚಿನ ಅಂಶಗಳನ್ನು ಆತನ ಜಾತಿ ನಿರ್ದಾರ ಮಾಡುತ್ತದೆ ಅಥವಾ ಜಾತಿಗೆ ಹೊಂದಿಕೊಂಡು ಇರುತ್ತದೆ. ಪ್ರತಿಯೊಂದು ಜಾತಿ, ಸಮುದಾಯಗಳು

ಅಭಿವೃದ್ದಿಯನ್ನು ಸಾಧಿಸುವ ಉದ್ದೇಶವನ್ನು ಇಟ್ಟುಕೊಂಡು ಮಾಡುವ ಪ್ರಯತ್ನಗಳು ಎಲ್ಲರಿಗೂ ಎದ್ದು ಕಾಣುತ್ತವೆ. ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ದಿ ಸಾದಿಸುವುದಕ್ಕೋಸ್ಕರ ಪ್ರತಿಯೊಂದು ಜಾತಿ ಸಮುದಾಯಗಳೂ ಅದರಲ್ಲೂ ಅಂಚೀಕೃತ ಗುಂಪುಗಳು ಶ್ರಮಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಸೊರೋಕಿನ್‌ರವರು ಸಾಮಾಜಿಕ ಚಲನೆಯ ಅಂಶಗಳನ್ನು ವಿಶ್ಲೇಶಿಸುತ್ತಾ, ಅವುಗಳನ್ನು ಪ್ರಾಥಮಿಕ ಮತ್ತು ಮಾದ್ಯಮಿಕ ಎಂಬುದಾಗಿ ವಿಂಗಡಿಸುತ್ತಾರೆ. ಸೊರೋಕಿನ್ ಮಹತ್ವ ಕೊಟ್ಟಂತಹ ಪ್ರಾಥಮಿಕ ಅಂಶಗಳು ಪೋಷಕರು ಮತ್ತು ಮಕ್ಕಳ ನಡುವಿನ ಬಿನ್ನತೆ, ಪರಿಸರದ ಬದಲಾವಣೆ ಪ್ರಮುಖವಾಗಿ ಮಾನವೀಯ ಸಾಮಾಜಿಕ ಪರಿಸರ ಮತ್ತು ಸಾಮಾಜಿಕ ಸ್ತರದೊಳಗಡೆ ವ್ಯಕ್ತಿಗಳ ದೋಷಯುಕ್ತ ಸಾಮಾಜಿಕ ಹಂಚಿಕೆ. ಸೊರೋಕಿನ್ ಪ್ರಸ್ತಾಪಿಸಿದ ಮಾದ್ಯಮಿಕ ಅಂಶಗಳು ಯಾವುವೆಂದರೆ ಸಾಮಾಜಿಕ ಸ್ತರ ವಿನ್ಯಾಸದ ವಿಧಾನಗಳು, ಶೈಕ್ಷಣಿಕ ಅವಕಾಶಗಳು, ನಗರೀಕರಣ ಮತ್ತು ಮಾನಸಿಕ ಪ್ರೇರಣೆ. ಅವರ ಅಭಿಪ್ರಾಯದಂತೆ ವ್ಯಕ್ತಿಗಳ ಲಂಬ ರೀತಿಯ ಬದಲಾವಣೆಯು ಕೆಲವೊಂದು ಪ್ರಮುಖ ಸಾಮಾಜಿಕ ಸಂಸ್ಥೆಗಳಾದ ಸೈನ್ಯ, ಶಾಲೆ, ಚರ್ಚ್, ರಾಜಕೀಯ ಪಕ್ಷಗಳು ಮತ್ತು ವಿವಿಧ ಔದ್ಯೋಗಿಕ ಸಂಸ್ಥೆಗಳ ಮೂಲಕ ಗಂಭೀರ ರೀತಿಯಲ್ಲಿ ಸಂಭವಿಸುವುದು. ಅವುಗಳು ವ್ಯಕ್ತಿಯನ್ನು ಮೇಲಕ್ಕೆತ್ತುವ ಅಥವಾ ಕೆಳಗಿಳಿಸುವ ಯಂತ್ರದ ಪಾತ್ರವನ್ನು ನಿರ್ವಹಿಸುವುದು. ಲಂಬ ಚಲನೆಯು ಸಮಾಜದ ಒಳಗಡೆಯೇ ಇರುವಂತಹ ಸಂಕೀರ್ಣ ಯಾಂತ್ರಿಕತೆ,ಸಾಮಾಜಿಕ ಪ್ರಯೋಗ,ಆಯ್ಕೆ,ಮತ್ತು ವಿತರಣೆ ಇವುಗಳಿಂದ ನಿಯಂತ್ರಣಕ್ಕೊಳಪಟ್ಟಿರುತ್ತದೆ.ಈ ಯಾಂತ್ರಿಕತೆಯು ಸಾಮಾಜಿಕ ಸಂಸ್ಥೆಗಳಿಂದ ರಚಿಸಲ್ಪಟ್ಟಿದ್ದು,ಇವುಗಳು ವ್ಯಕ್ತಿಯ ವರ್ತನೆ ಮತ್ತು ಸಾಮಾನ್ಯ ಜ್ಞಾನ ವನ್ನು ಪರೀಕ್ಷೆಗೊಳಪಡಿಸುವುವು.ಈ ರೀತಿಯಲ್ಲಿ ಸಂಸ್ಥೆಗಳು ನಿರ್ವಹಿಸುವ ಪರೀಕ್ಷಿಸುವ ಮತ್ತು ಅಯ್ಕೆ ಮಾಡುವ ಕಾರ್ಯವು ಶೈಕ್ಷಣಿಕ ಅಥವಾ ತರಬೇತಿಗೊಳಿಸುವ ಕಾರ್ಯದಷ್ಟೇ ಪ್ರಾಮುಖ್ಯವಾದುದು.

ಮತ್ತೋರ್ವ ಸಮಾಜಶಾಸ್ತ್ರಜ್ಞ **ಜಿ.ಎಸ್. ಘುರ್ಯೆಯರ** ಅಭಿಪ್ರಾಯ (1969) ಪಟ್ಟಿರುವಂತೆ ಉದ್ಯೋಗದ ಆಯ್ಕೆಯಲ್ಲಿಯ ನಿರ್ಬಂಧ, ಜಾತಿ ವ್ಯವಸ್ಥೆಯ ಒಂದು ಪ್ರಮುಖ ಲಕ್ಷಣ. ಉದ್ಯೋಗವು ದೈವದತ್ತವಾದುದು ಅದನ್ನು ಬದಲಾಯಿಸಲು ಸಾದ್ಯವಿಲ್ಲ ಆದುದರಿಂದ ಪುರೋಹಿತನಾದವನು ಪುರೋಹಿತ್ಯ ಕೆಲಸವನ್ನೇ ಮಾಡಬೇಕು ಚಮ್ಮಾರ, ಬಡಿಗ ಕೆಲಸ ಮಾಡುವವ ಮತ್ತು ಆತನ ಮಕ್ಕಳು ಅದೇ ಕೆಲಸ ಮಾಡಬೇಕು ಎಂಬುದಾಗಿ ತಿಳಿಯಪಡಿಸುತ್ತಾನೆ. ಇದರ ಮೂಲಕ ಸಾಮಾಜಿಕ ಸಂಚಲನ ಅಸಾದ್ಯವಾದ ವಿಷಯ ಎಂಬುದಾಗಿ ಹೇಳುತ್ತಾರೆ.

ಎಂ.ಎನ್. ಶ್ರೀನಿವಾಸ್ ಅವರ ಅಭಿಪ್ರಾಯದಲ್ಲಿ ಪರಿಶಿಷ್ಟ ಜಾತಿಯ ಜನರು ಮೇಲ್ಜಾತೀಯ ಜನರ ರೂಡಿ ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನವನ್ನು ಕಾಣಬಹುದು. ಈ ರೀತಿಯಲ್ಲಿ ಮೇಲ್ಜಾತೀಯ ಜನರ ಆಚಾರ ವಿಚಾರ, ರೂಡಿ ಗಳನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಸ್ಥಾನಮಾನದಲ್ಲೂ ಏರಿಕೆಯನ್ನು

ಕಾಣುತ್ತೇವೆ ಎಂಬ ನಂಬಿಕೆ ಹೊಂದಿರುತ್ತಾರೆ. ಈ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿಗಳ ಸಾಮಾಜಿಕ–ಸಾಂಸ್ಕೃತಿಕ ಅಂಶಗಳಲ್ಲಿ ಆಗುವ ಬದಲಾವಣೆಯ ಕುರಿತು ಉದ್ದೇಶಿಸಲಾಗುತ್ತದೆಯೇ ಹೊರತು ರಾಜಕೀಯ–ಆರ್ಥಿಕ ಬದಲಾವಣೆಯ ಬಗ್ಗೆ ಅಲ್ಲ. ಅಲ್ಲದೆ ಸಂಸ್ಕೃತಾನುಕರಣವು ಸಮೂಹ ಚಲನೆಯನ್ನು ಪ್ರತಿನಿಧಿಸುತ್ತದೆಯೇ ಹೊರತು ವ್ಯಕ್ತಿ ಚಲನೆಯನ್ನಲ್ಲ (ಜೋಶೆಪ್ 1986).

ಸಾಮಾಜಿಕ ಚಲನೆಗೆ ಹಲವಾರು ಕಾರಣಗಳು ಇದ್ದಿರಬಹುದು, ಭಾರತದಲ್ಲಿ ಸಾಮಾಜಿಕ ಚಲನೆಗೆ ಮೂಲ ಕಾರಣಗಳು ಸಂಸ್ಕೃತೀಕರಣ, ಪಾಶ್ಚಿಮಾತ್ಯೀಕರಣ,ಸಾರ್ವತ್ರೀಕರಣ, ಇದರ ಮೂಲಕವಾಗಿ ಸಮಾಜದಲ್ಲಾಗುವ ಸ್ಥಾನಿಕ ಬದಲಾವಣೆಯನ್ನು ಸಾಮಾಜಿಕ ಚಲನೆಯು ಸೂಚಿಸುವುದು.

ಕೈಗಾರಿಕೀಕರಣ ಮತ್ತು ನಗರೀಕರಣ: ಕೈಗಾರಿಕೆಗಳ ಕ್ಷಿಪ್ರಗತಿಯ ಬೆಳವಣಿಗೆಯು ಮತ್ತು ಇದರ ಕಾರಣದಿಂದಾಗಿ ಅದ ಹಲವು ಉದ್ಯೋಗಗಳ ಸೃಷ್ಟಿಯು ಗ್ರಾಮೀಣ ಪ್ರದೇಶಗಳಿಂದ ನಗರಗಳ ಕಡೆಗೆ ಜನರನ್ನು ಹೆಚ್ಚು ಆಕರ್ಷಿಸಿತು ಮತ್ತು ಇದರಿಂದಾಗಿ ನಗರಗಳೂ ಕೂಡಾ ಬೆಳೆಯತೊಡಗಿದವು. ಕೈಗಾರಿಕೆಗಳು ಹಲವು ಹೊಸ ಉದ್ಯೋಗಗಳ ಸೃಷ್ಟಿಗೆ ಕಾರಣವಾಗಿದ್ದು ಮಾತ್ರವಲ್ಲದೆ ಸಾಂಪ್ರಾದಾಯಿಕ ಉದ್ಯೋಗಗಳಿಗೆ ದೊಡ್ಡ ಹೊಡೆತವನ್ನೇ ನೀಡಿತು. ನಗರೀಕರಣ ಪ್ರಕ್ರಿಯೆಯಂತೂ ಹಲವು ಜಾತಿಗಳ ಜನರು ಒಟ್ಟಿಗೆ ನೆಲೆಸಲು ಕಾರಣವಾಯಿತು.ಇಲ್ಲಿ ಸೃಷ್ಟಿಸಲ್ಪಟ್ಟಂತಹ ಹಲವು ಹೊಸ ಉದ್ಯೋಗಗಳು, ಸಾಂಪ್ರದಾಯಿಕ ಔದ್ಯೋಗಿಕ ರಚನೆಗೆ ಒಗ್ಗಿಕೊಳ್ಳುವಂತಹವು ಆಗಿರದೆ ಜನರಲ್ಲಿ ಹೊಸರೀತಿಯ ಔದ್ಯೋಗಿಕ ಆಚರಣೆಗಳು ಹಾಗೂ ಮನೋಭಾವನೆ ಮೂಡಿಸಲು ಕಾರಣವಾಯಿತು.

ಸಂಸ್ಕೃತಾನುಕರಣ: ಈ ಪ್ರಕ್ರಿಯೆಯಲ್ಲಿ ಕೆಳಮಟ್ಟದ ಜಾತಿಗಳು ಮೇಲ್ಮಟ್ಟದ ಜಾತಿಗಳ ಆಚಾರ –ವಿಚಾರ, ಸಿದ್ದಾಂತ, ಆಹಾರ ಅಭ್ಯಾಸಗಳು ಮೊದಲಾದವುಗಳನ್ನು ಅಳವಡಿಕೆ ಮಾಡಿಕೊಳ್ಳುವ ಮೂಲಕ ಮೇಲ್ ಅಂತಸ್ತುನ್ನು ಪಡೆದಿವೆ.ಅಲ್ಲದೆ ಸಮಾಜದಲ್ಲಿ ಬಹು ಸಂಖ್ಯಾತ ಪ್ರಬಲ ಜಾತಿಗಳು ಎಂದು ಪರಿಗಣಿಸಲ್ಪಡುವ ಜಾತಿಗಳ ನಾಮಕರಣ ವಿಧಾನವನ್ನೂ ಬಳಸಲಾಗುತ್ತದೆ.ಆದ್ದರಿಂದ ಇರುವ ವ್ಯವಸ್ಥೆಯಲ್ಲೇ ಅದರ ಒಳಗಡೆಯೇ ಬದಲಾವಣೆ ಸಂಭವಿಸುವುದು. ಆದ್ದರಿಂದ ಶ್ರೀನಿವಾಸ್ ಅವರ ಅಭಿಪ್ರಾಯದಲ್ಲಿ ಜಾತಿಯ ಸ್ಥರೀಕರಣ ವ್ಯವಸ್ಥೆಯಲ್ಲಿ ಆಗುವ ಸ್ಥಾನಿಕ ಬದಲಾವಣೆಯನ್ನು ಸೂಚಿಸುವುದು. ಮತ್ತು ಈ ಪ್ರಕ್ರಿಯೆ ಉನ್ನತ ಸ್ಥಾನಮಾನದ ಗಳಿಕೆಗಾಗಿ ಕೆಳಮಟ್ಟದ ಜಾತಿಗಳಲ್ಲಿ ಸಾಮೂಹಿಕ ಚಲನೆಯಾಗುವುದನ್ನು ಕಾಣಬಹುದು. ಇಲ್ಲಿ ಒಂದು ಪ್ರದೇಶದ, ಗ್ರಾಮದ ಪ್ರಬಲ ಜಾತಿಯನ್ನು ಉಲ್ಲೇಖ ಸಮೂಹ ಎಂಬುದಾಗಿ ಪರಿಗಣಿಸಲಾಗಿರುತ್ತದೆ.(ದಾಮ್ಲೆ1968).

ರಾವ್ (1967) ರವರು ಅಭಿಪ್ರಾಯ ಪಡುವಂತೆ ಪಾಶ್ಚಿಮಾತ್ಯ ಔಪಚಾರಿಕ ಶಿಕ್ಷಣವು ಜಾತಿ ವ್ಯವಸ್ಥೆಯ ಮೇಲೆ ಎರಡು ರೀತಿಯ ಪ್ರಬಾವವನ್ನು ಬೀರಿದೆ. ಮೊದಲನೆಯದಾಗಿ ಹೊಸ ಶಿಕ್ಷಣ ವ್ಯವಸ್ಥೆಯು ಉದ್ಯೋಗ ಮತ್ತು ಜಾತಿ ಇವುಗಳನ್ನು ಪರಸ್ಪರ ಪ್ರತ್ಯೇಕಿಸಿತು. ಆಧುನಿಕ ಕೈಗಾರಿಕೆಗಳು ಹೊಸ ಪ್ರಾವೀಣ್ಯತೆಯನ್ನು ಹೊಂದಿದ

ಉದ್ಯೋಗಗಳನ್ನು ಬಯಸಿದ ಕಾರಣದಿಂದಾಗಿ ಆಧುನಿಕ ಶಿಕ್ಷಣವನ್ನು ಪಡೆದವರು ಈ ಅವಕಾಶಗಳನ್ನು ಬಳಸಿಕೊಳ್ಳಲು ಸಹಾಯಕವಾಯಿತು. ಅಲ್ಲದೆ ಯಾರೆಲ್ಲಾ ಈ ಶಿಕ್ಷಣವನ್ನು ಪಡೆದರೋ ಅವರುಗಳು ಜಾತಿಯ ಹೊರಗಡೆಯಿಂದ ಹೊಸ ಹೊಸ ನೈಪುಣ್ಯತೆಗಳನ್ನು ಗಳಿಸಿಕೊಳ್ಳುವ ಮೂಲಕ ಜಾತಿಯ ಕಪಿಮುಷ್ಟಿಯಿಂದ ಹೊರ ಬಂದು ಸಮಾಜದಲ್ಲಿ ಸ್ವತಂತ್ರವಾಗಿ ಸ್ಥಾನಮಾನ ಪಡೆಯಲು ಕಾರಣವಾಯಿತು. ಎರಡನೆಯದಾಗಿ ಪಾಶ್ಚಿಮಾತ್ಯ ಶಿಕ್ಷಣ ವ್ಯವಸ್ಥೆಯು ಸಾಮಾಜೀಕರಣಗೊಳಿಸುವ ಒಂದು ಸಂಸ್ಥೆಯಾಗಿ ಜನರನ್ನು ಸ್ತರ ವ್ಯವಸ್ಥೆಯನ್ನು ಹೊಂದಿರುವಂತಹ ಜೀವನ ವಿಧಾನವನ್ನು ಅಳವಡಿಸಿಕೊಳ್ಳಲು ಕಾರಣವಾದ ಅಂಶವಾಯಿತು, ಜತೆಗೆ ಜನರು ಪೂರ್ವಾಗ್ರಹಗಳಿಂದ ಹೊರಬಂದು ಸಾರ್ವತ್ರಿಕರಣಗೊಳಿಸಲ್ಪಟ್ಟಂತಹ ಮೌಲ್ಯಗಳನ್ನು, ವರ್ತನೆಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಯಿತು.

ಶಿಕ್ಷಣವು ವ್ಯಕ್ತಿಯು ಉತ್ತಮ ಜ್ಞಾನವನ್ನು ಪಡೆಯಲು ಸಹಾಯಕವಾಗಿದ್ದು, ತರ್ಕಬದ್ದ ಆಲೋಚನೆಗಳಿಗೆ ಉತ್ತೇಜನವನ್ನು ನೀಡುವುದು, ಜತೆಗೆ ವ್ಯಕ್ತಿಯ ಸಾಮಾಜಿಕ ಗೌರವವನ್ನು ಹೆಚ್ಚಿಸುವುದು ಜತೆಗೆ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಮಾಡುವುದಲ್ಲದೆ, ಸಮಸ್ಯೆಗಳಿಗೆ ಪರಿಹಾರವನ್ನು ನೀಡುವುದು. ಶಿಕ್ಷಣವು ಜನರಿಗೆ ತಮ್ಮ ಸಾಮರ್ಥ್ಯವನ್ನು ತಿಳಿಯಲು ಸಹಾಯಕಾರಿಯಾದುದು. ಆದ್ದರಿಂದ ಶಿಕ್ಷಣವು ಒಬ್ಬ ವ್ಯಕ್ತಿಯನ್ನು ಸಮಾಜದಲ್ಲಿ ಬಹಳ ಮೇಲ್ಮಟ್ಟಕ್ಕೆ ಕೊಂಡೊಯ್ಯುವಂತಹ ಏಕೈಕ ಸಾಧನ ಎನ್ನಬಹುದು.

ಆಧುನಿಕ ಶಿಕ್ಷಣವು ಜನರು ತರ್ಕಬದ್ದವಾಗಿ ಆಲೋಚಿಸಲು ಹೇಳಿಕೊಡುವುದಲ್ಲದೆ, ಆದುನೀಕರಣ ಪ್ರಕ್ರಿಯೆಗೆ ಸಹಾಯಕವಾಗಿರುವುದು, ವಿದ್ಯಾರ್ಥಿಗಳಲ್ಲಿ ತನ್ನ ಜೀವನವನ್ನು ಬದಲಾಯಿಸಿಕೊಳ್ಳುವಂತಹ ಸಾಮರ್ಥ್ಯ, ಆಸಕ್ತಿಗಳನ್ನು ಬೆಳೆಸುವ ಮೂಲಕವಾಗಿ ಸಂಪೂರ್ಣ ಜೀವನ ವಿಧಾನದಲ್ಲಿ ಬದಲಾವಣೆಗೆ ಸಹಾಯಕಾರಿಯಾಗಿ ಶಿಕ್ಷಣ ಕಾರ್ಯನಿರ್ವಹಿಸುತ್ತದೆ. ಅದರ ಜತೆಗೆ ವಿದ್ಯಾರ್ಥಿಗಳು ಹೊಸ ಹೊಸ ರೀತಿಯ ಉದ್ಯೋಗವನ್ನು ಕೈಗೊಳ್ಳುವಂತೆ ಪ್ರೇರೇಪಿಸುವುದು.

ದಕ್ಷಿಣ ಕನ್ನಡ ಜಿಲ್ಲೆಯ ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯಗಳಲ್ಲಿ ಸಾಮಾಜಿಕ ಚಲನೆ:

ಭಾರತ ಸಂವಿಧಾನದ 341 ನೆಯ ವಿಧಿಯಂತೆ 56 ಗುಂಪುಗಳನ್ನು ಪರಿಶಿಷ್ಟ ಜಾತಿ ಎಂಬುದಾಗಿಯೂ 342ನೆಯ ವಿಧಿಯಂತೆ 3 ಗುಂಪುಗಳನ್ನು ಬುಡಕಟ್ಟುಗಳೆಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುತಿಸಲಾಗಿದೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಾಟಿ ನಾಯ್ಕ್, ಮಲೆಕುಡಿಯ, ಕೊರಗ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳಿಗೆ ಸೇರಿಸಲಾಗಿದೆ. ಇದರಲ್ಲಿ ಶೇಕಡಾ 70.66ರಷ್ಟು ಮರಾಟಿ ಜನಾಂಗದವರಿದ್ದು ಕೊರಗ ಮತ್ತು ಮಲೆಕುಡಿಯ ಸಮುದಾಯದವರು ಐದನೇ ಒಂದು ಭಾಗದಷ್ಟು ಇದ್ದಾರೆ.

ಇತ್ತೀಚಿನವರೆಗಿನ ಸಂಶೋಧನೆಗಳು ಬುಡಕಟ್ಟು ಸಮಾಜದ ಕೆಲವು ಸಮಸ್ಯೆಗಳ ಕುರಿತಾಗಿ ಮಾತ್ರಾ ಇದ್ದು ಸಮಾಜ ವಿಕಸಿತವಾದಂತೆ ಬುಡಕಟ್ಟು ಜನಾಂಗಗಳೂ ಕೂಡಾ ಹೊಸ ಹೊಸ ಸಮಸ್ಯೆ ಸವಾಲುಗಳನ್ನು

ಎದುರಿಸುತ್ತಿವೆ. ಆದ್ದರಿಂದ ಅಭಿವೃದ್ದಿಯ ಕುರಿತಾಗಿ ಹೊಂದುವ ಧೋರಣೆಗಳಲ್ಲೂ ಬದಲಾವಣೆಯನ್ನು ಕಾಣಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಬುಡಕಟ್ಟು ಸಮುದಾಯಗಳ ಸೂಕ್ಷ್ಮವಾದ ಅಧ್ಯಯನದ ಅಗತ್ಯವಿದೆ. ಈ ಮೂಲಕವಾಗಿ ಅವರ ವಿಶಿಷ್ಟ ಜೀವನ ಕ್ರಮ ಹಾಗೂ ಸ್ಥಿತಿಗತಿಗಳನ್ನು ಅರಿತುಕೊಳ್ಳುವ ಮೂಲಕ ಅವರ ಅಭಿವೃದ್ದಿಗೆ ಕಾರಣವಾಗಬಹುದಾದ ಹೊಸ ಯೋಜನೆಗಳನ್ನು ರೂಪಿಸಲು ಸಾದ್ಯ. ಸರ್ಕಾರವು ಇಂತಹ ಬುಡಕಟ್ಟುಗಳ ಜೀವನ ಮಟ್ಟವನ್ನು ಸುಧಾರಿಸಲು ಹಲವು ಸೌಲಭ್ಯಗಳನ್ನು ಒದಗಿಸಿದರೂ ಕೂಡಾ ನಿಜವಾದ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಕಂಡು ಬರುವ ಭ್ರಷ್ಟಾಚಾರ, ನಿರ್ದಾಕ್ಷಿಣ್ಯ ಭಾವನೆಗಳಿಂದಾಗಿ ಅಭಿವೃದ್ದಿ ಹೊಂದಿದ ಜನರು ಮಾತ್ರಾ ಗುರುತಿಸಲ್ಪಡುತ್ತಾರೆಯೇ ಹೊರತು ಸಮಸ್ಯೆಗಳ ಕೂಪದಲ್ಲಿ ಬಿದ್ದಿರುವ ಜನರು ಶೈಕ್ಷಣಿಕ ಕಾರಣದಿಂದಲೋ ಅಥವಾ ಜಾಗೃತಿಯ ಕೊರತೆಯಿಂದಲೋ ಅಥವಾ ದಾಖಲೆಗಳನ್ನು ನೀಡಬೇಕಾಗುವಲ್ಲಿನ ತೊಡಕುಗಳಿಂದಲೋ ಇನ್ನೂ ಕೂಡಾ ಅಭಿವೃದ್ದಿಯನ್ನು ಕಾಣದವರಾಗಿದ್ದಾರೆ.

ಅಧ್ಯಯನದ ಹಿನ್ನಲೆ:

ಔದ್ಯೋಗಿಕ ಚಲನೆಯು ಓರ್ವ ವ್ಯಕ್ತಿಯ ಜೀವಿತ ಕಾಲಾವದಿಯಲ್ಲಿ ಹಲವಾರು ಉದ್ಯೋಗಗಳಿಗೆ ತನ್ನನ್ನು ತಾನು ಬದಲಾಯಿಸಿಕೊಳ್ಳುವುದನ್ನು ಸೂಚಿಸುತ್ತದೆ. ಇದು ಅಂತರ್ ತಲೆಮಾರು ಔದ್ಯೋಗಿಕ ಚಲನೆ ಅಥವಾ ಆಂತರಿಕ ತಲೆಮಾರು ಔದ್ಯೋಗಿಕ ಚಲನೆಯಾಗಿರಬಹುದು. ಈ ಔದ್ಯೋಗಿಕ ಚಲನೆಯು ಸಮಾಜದ ಆರ್ಥಿಕ ಸ್ಥಿತಿಗತಿಯ ಮೇಲೆ ಧನಾತ್ಮಕ ಪರಿಣಾಮವನ್ನು ಬೀರುವುದು, ಅಲ್ಲದೆ ಅದರ ಜತೆಗೆ ಶಿಕ್ಷಣ ಮತ್ತು ವ್ಯಕ್ತಿಯ ಸ್ಥಾನಮಾನದ ಮೇಲೆಯೂ ಪರಿಣಾಮವನ್ನು ಬೀರುವುದು. ಅಂತರ್ ತಲೆಮಾರು ಔದ್ಯೋಗಿಕ ಚಲನೆಯು ವ್ಯಕ್ತಿಗಳು ತಮ್ಮ ಆಯ್ಕೆಗೆ ಅನುಗುಣವಾಗಿ ಆ ಉದ್ಯೋಗಗಳಲ್ಲಿ ವಿಶಿಷ್ಟೀಕರಣವನ್ನು ಪಡೆಯಲು ಅವಕಾಶವನ್ನು ಒದಗಿಸುವುದು. ಮೇಲ್ಮುಖ ಔದ್ಯೋಗಿಕ ಚಲನೆಯು ಒಂದು ಕುಟುಂಬದ ಜೀವನ ಮಟ್ಟದ ಸುಧಾರಣೆಯನ್ನು ಕಾಣಲು ಅವಕಾಶ ಒದಗಿಸುತ್ತದೆ. ಆದರೆ ಔದ್ಯೋಗಿಕ ಚಲನೆಯ ವ್ಯಾಪ್ತಿ ಮತ್ತು ಸ್ವರೂಪವು, ಶಿಕ್ಷಣ ಕ್ಷೇತ್ರದ ಮತ್ತು ಕಾರ್ಮಿಕ ಸರಬರಾಜಿನ ಮೇಲೆ ಪರಿಣಾಮವನ್ನು ಬೀರುವ ನೀತಿಯನ್ನು ಅನುಸರಿಸಿ ಸಮಾಜದಿಂದ ಸಮಾಜಕ್ಕೆ, ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸಾತ್ಮಕವಾಗಿರುವುದು.

ಅಧ್ಯಯನದ ಉದ್ದೇಶಗಳು:

ಒಂದು ತಲೆಮಾರಿನ ಒಳಗಿನ ಔದ್ಯೋಗಿಕ ಚಲನೆಯು ಸಾಮಾಜಿಕ–ಆರ್ಥಿಕ ಅಭಿವೃದ್ದಿಯನ್ನು ಪ್ರೋತ್ಸಾಹಿಸುತ್ತದೆ. ಒಂದು ಸಮುದಾಯದ ಅಧ್ಯಯನವನ್ನು ಪರಿಣಾಮಕಾರಿಯಾಗಿ ಮಾಡಲು ಆ ಸಮುದಾಯದ ಸಾಮಾಜಿಕ–ಆರ್ಥಿಕ ವಿಚಾರಗಳನ್ನು ಮೊದಲು ತಿಳಿಯಬೇಕಾದ ಅಗತ್ಯತೆ ಇದೆ. ಅಲ್ಲದೆ ಔದ್ಯೋಗಿಕ ಚಲನೆಯ ಸ್ವರೂಪ ಮತ್ತು ದಿಕ್ಕು ಆರ್ಥಿಕ ವಿಚಾರಗಳನ್ನು ಒಳಗೊಂಡಿದೆ. ಅಧ್ಯಯನದ ನಿರ್ಧಿಷ್ಟವಾದ ಉದ್ದೇಶಗಳು ಈ ಕೆಳಗಿನಂತಿವೆ.

1. ದಕ್ಷಿಣ ಕನ್ನಡ ಜಿಲ್ಲೆಯ ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯದವರ ಸಾಮಾಜಿಕ_ಆರ್ಥಿಕ ಸ್ಥಿತಿಗತಿಯನ್ನು ವಿಶ್ಲೇಷಣೆ ಮಾಡುವುದು.
2. ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯದ ಪ್ರಮುಖ ಸಾಮಾಜಿಕ ಸಂಸ್ಥೆಗಳಾದಂತ, ವಿವಾಹ, ಕುಟುಂಬ, ಜಾತಿ, ಧರ್ಮ, ಮುಂತಾದವುಗಳ ರಚನೆ ಮತ್ತು ಕಾರ್ಯಗಳು ಅವುಗಳಲ್ಲಿ ಕಂಡು ಬರುವಂತ ಬದಲಾವಣೆಗಳನ್ನು ಗುರುತಿಸುವುದು.
3. ಮರಾಟಿ ನಾಯ್ಕ್ ಸಮುದಾಯದ ಶೈಕ್ಷಣಿಕ ಸ್ಥಾನಮಾನ ಮತ್ತು ತಮ್ಮ ಮತ್ತು ತಮ್ಮ ಮಕ್ಕಳ ಭವಿಷ್ಯತ್ತಿನ ಶಿಕ್ಷಣದ, ಉದ್ಯೋಗದ ಬಗ್ಗೆ ಅವರಿಗಿರುವ ಅಕಾಂಕ್ಷೆಗಳನ್ನು ಕಂಡು ಹಿಡಿಯುವುದು
4. ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯದವರ ಆರೋಗ್ಯ ಸ್ಥಿತಿಗತಿ ಮತ್ತು ಲಬ್ಯವಿರುವ ಸವಲತ್ತುಗಳ ಬಳಕೆ ಮತ್ತು ಸಮಸ್ಯೆಗಳನ್ನು ಪರೀಕ್ಷಿಸಿಸುವುದು.
5. ಮರಾಟಿ ನಾಯ್ಕ್ ಸಮುದಾಯದ ಅಭಿವೃದ್ದಿಯಲ್ಲಿ, ಸಾಮಾಜಿಕ ಚಲನೆಯಲ್ಲಿ ಸರಕಾರಿ ಯೋಜನೆಗಳ ಪಾತ್ರ ಮತ್ತು ಅವುಗಳ ಬಳಕೆ ಮತ್ತು ಬಳಕೆಯಾಗದಿರಲು ಮೂಲ ಕಾರಣಗಳನ್ನು ತಿಳಿಯುವುದು.

ಸಂಶೋಧನಾ ವಿಧಾನ

ಪ್ರಸ್ತುತ ಸಂಶೋಧನಾತ್ಮಕ ಅಧ್ಯಯನವು ಕ್ಷೇತ್ರಕಾರ್ಯ ತನಿಖೆಯಾಗಿದೆ. ಇಲ್ಲಿ ಪ್ರಾಥಮಿಕ ಮತ್ತು ಮಾದ್ಯಮಿಕ ದತ್ತಾಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ. ಮಾದ್ಯಮಿಕ ದತ್ತಾಂಶಗಳನ್ನು ಬಳಕೆ ಮಾಡುವ ಮೂಲಕವಾಗಿ ಪರಿಕಲ್ಪಣಾತ್ಮಕ, ಸೈದ್ದಾಂತಿಕ, ಪ್ರಾಯೋಗಿಕ ಅಧ್ಯಯನಗಳಿಗೆ ಸಂಬಂಧಿಸಿದ ಇತ್ತೀಚಿನ ಬದಲಾವಣೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಮಾದ್ಯಮಿಕ ದತ್ತಾಂಶಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಲಾಗಿದೆ. ವಿವಿಧ ಸರಕಾರೀ ಕಚೇರಿಗಳಾದ ಐ.ಟಿ.ಡಿ.ಪಿ, ತಾಲೂಕು ಮತ್ತು ಜಿಲ್ಲಾಧಿಕಾರಿಗಳ ಕಚೇರಿ, ಸಮಾಜಕಲ್ಯಾಣ ಇಲಾಖೆ, ಸಮುದಾಯ ಸಂಘಟನೆಗಳಾದ ಪುತ್ತೂರು ಮರಾಟಿ ಸಮಾಜ ಸೇವಾ ಸಂಘ, ಸುಳ್ಯ ಮರಾಟಿ ಸಂಘ , ಮಂಗಳೂರು ಮರಾಟಿ ಸಮಾಜ ಸೇವಾ ಸಂಘ, ಮತ್ತು ಸಮುದಾಯದ ವಿವಿಧ ಜವಾಬ್ದಾರಿಗಳನ್ನು ಹೊಂದಿದ ವ್ಯಕ್ತಿಗಳನ್ನು ವಿಚಾರಿಸುವ ಮೂಲಕ , ಅಲ್ಲದೆ ಸರಕಾರೀ ರಾಜ್ಯಪತ್ರ, ಸರಕಾರೀ ಸಂಖ್ಯಾಶಾಸ್ತ್ರೀಯ ಇಲಾಖೆಗಳನ್ನು ಸಂದರ್ಶಿಸುವ ಮೂಲಕ ಜನಗಣತಿ ಯ ವರದಿಗಳನ್ನು ಸಂಗ್ರಹಿಸಲಾಗಿದೆ.ಅಲ್ಲದೆ ಹಲವಾರು ಗ್ರಂಥಾಲಯಗಳನ್ನು ಭೇಟಿ ನೀಡುವ ಮೂಲಕ ಹಲವು ದಾಖಲೆಗಳನ್ನು ಸಂಗ್ರಹಿಸಲಾಯಿತು. ಇದರ ಜತೆಗೆ ಇತ್ತೀಚಿನ ತಂತ್ರಜ್ನಾನಿಕ ಬೆಳವಣಿಗೆಯ ಫಲಶ್ರುತಿಗಳಾದ ಅಂತರ್ಜಾಲ, ಐಬಿಎಮ್– ಎಸ್.ಪಿ.ಎಸ್.ಎಸ್. ಮೈಕ್ರೊಶಾಪ್ಟ್ –ಎಕ್ಸೆಲ್ ಮೊದಲಾದವುಗಳು ವಿಶ್ಲೇಷಣೆಗೆ ಸಹಕಾರಿಯಾಗಿವೆ.

ಅಧ್ಯಯನದ ವ್ಯಾಪ್ತಿ:

2011ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 20,89,649 ರಷ್ಟು ಜನಸಂಖ್ಯೆ ಇದ್ದು, ಇದರಲ್ಲಿ 10,34,714 ಪುರುಷರು ಮತ್ತು 10,54,935 ಮಹಿಳೆಯರು ಇದ್ದಾರೆ. ಪ್ರತಿ ಚದರ ಕಿಲೋಮೀಟರ್ ಗೆ 457 ರಷ್ಟು ಜನ ಸಾಂದ್ರತೆಯನ್ನು ಹೊಂದಿದೆ. ಈ ಜನಗಣತಿಯ ಪ್ರಕಾರ ಲಿಂಗಾನುಪಾತವು 10.11%. ಇದ್ದು, 1020 ರಷ್ಟರಲ್ಲಿ 6 ವರ್ಷದವರೆಗಿನ ಮಕ್ಕಳ ಲಿಂಗಾನುಪಾತ 947 ತಲುಪಲಿದೆ. ಅದೇ ರೀತಿ ಸಾಕ್ಷರತಾ ಪ್ರಮಾಣವು 88.57 ಆಗಿದೆ. ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ 93.13 ಮತ್ತು ಸ್ತ್ರೀಯರ ಸಾಕ್ಷರತೆ 84.13 ಆಗಿದೆ. ಇಲ್ಲಿ 8 ವಿಧಾನಸಭಾ ಕ್ಷೇತ್ರಗಳಿದ್ದು, ಪ್ರಸ್ತುತ 331 ಗ್ರಾಮಗಳು, 230 ಗ್ರಾಮ ಪಂಚಾಯತಿಗಳು, 1ನಗರಪಾಲಿಕೆ, 4 ಪುರಸಭೆ, ನಗರಸಭೆಯೂ, 5 ಪಟ್ಟಣ ಪಂಚಾಯತಿ, 5 ತಾಲೂಕು ಪಂಚಾಯತಿಗಳೂ ಇವೆ. ಇಷ್ಟೆಲ್ಲಾ ಶಕ್ತಿಯೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯು 5 ತಾಲೂಕುಗಳಾಗಿ ವಿಂಗಡಣೆಗೊಂಡಿದೆ. ಅವುಗಳಲ್ಲಿ ಮಂಗಳೂರು ಕೇಂದ್ರ ಸ್ಥಳವಾಗಿದ್ದು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯ, ಮೂಡಬಿದ್ರೆ ಮತ್ತು ಕಡಬಗಳು ಇದರ ಇತರ ತಾಲೂಕುಗಳು ಆಗಿವೆ.

ಶ್ರೇಣಿಕೃತ ಯಾದೃಛಿತ ಮಾದರಿಯ ಮೂಲಕ ಆಯ್ಕೆ ಮಾಡಬೇಕಾಗಿರುವ 400 ಜನ ಮಾಹಿತಿದಾರರನ್ನು ಪ್ರಶ್ನಾವಳಿಯನ್ನು ರಚಿಸಿ, ಆ ಪ್ರಶ್ನಾವಳಿ ಸೂಚಿಯನ್ನು ಆಧಾರವಾಗಿ ಸಂದರ್ಶನ ಮಾಡುವುದರ ಮೂಲಕ ಮಾಹಿತಿ ಸಂಗ್ರಹಿಸಲಾಯಿತು. ಸಂದರ್ಶನ ಮಾಡುವುದರ ಮೂಲಕ ಮಾಹಿತಿ ಸಂಗ್ರಹಿಸಿದರೆ, ಅವಲೋಕನದ ಮೂಲಕ ಕೂಡ ಹಲವಾರು ವಿಷಯಗಳನ್ನು ಅಧ್ಯಯನಕ್ಕೆ ಸಂಬಂಧಿಸಿದಂತೆ ಕಲೆಹಾಕಲಾಯಿತು. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಸರಳ ವಿಧಾನದ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಯಿತು. ಈ ರೀತಿಯಲ್ಲಿ ತಯಾರು ಮಾಡಿದ ಸಂಶೋಧನ ಪ್ರಭಂದವನ್ನು ಐದು ಅಧ್ಯಾಯಗಳಾಗಿ ವಿಂಗಡಣೆ ಮಾಡಿಕೊಂಡು, ಪ್ರತೀಯೊಂದು ಸಂಗತಿಯನ್ನು ಅಯಾಯ ಅಧ್ಯಾಯಗಳ ವ್ಯಾಪ್ತಿಯಲ್ಲಿ ಅರ್ಥಪೂರ್ಣವಾದ ರೀತಿಯಲ್ಲಿ ವಿವರಿಸಲಾಗಿದೆ.

ಅಧ್ಯಯನದ ವರ್ಗೀಕರಣ:

ಅಧ್ಯಯನವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡುವ ಉದ್ದೇಶದಿಂದ ಇಡೀ ಅಧ್ಯಯನವನ್ನು ಐದು ಪ್ರಮುಖ ಅಧ್ಯಯನಗಳಾಗಿ ಈ ಕೆಳಕಂಡ ರೀತಿಯಲ್ಲಿ ವರ್ಗೀಕರಿಸಲಾಗಿದೆ.

ಮೊದಲನೆಯ ಅಧ್ಯಯನ ಪೀಠಿಕೆ: ಈ ಅಧ್ಯಯನದಲ್ಲಿ ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯದ ಔದ್ಯೋಗಿಕ ಸಾಮಾಜಿಕ ಚಲನೆಗೆ ಸಂಬಂಧಿಸಿದಂತೆ ವಿವರವಾದ ಪೀಠಿಕೆಯನ್ನು ತಿಳಿಸಲಾಗಿದೆ. ಇದರ ಜೊತೆಗೆ ಕೆಲವೊಂದು ಪ್ರಮುಖ ಪರಿಕಲ್ಪನೆಗಳಾದಂತ ಬುಡಕಟ್ಟು, ಉದ್ಯೋಗ, ಸಾಮಾಜಿಕ ಸಂಚಲನೆ, ಅದರ ವಿಧಗಳು, ಮತ್ತು ಅದರ ಸೈದ್ಯಾಂತಿಕ ದೃಷ್ಟಿಗಳನ್ನು ವಿವರಿಸಲಾಗಿದೆ. ಇದರ ಜೊತೆಗೆ ಭಾರತದಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಮಾನ್ಯ ಜನರಲ್ಲಿ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಸಾಮಾಜಿಕ ಸಂಚಲನ ಹೇಗಿದೆ ಎಂಬುದನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಯನ ಸಾಹಿತ್ಯ ಪರಾಮರ್ಶನ: ಈ ಅಧ್ಯಯನದಲ್ಲಿ ಸಂಶೋಧನ ವಿಷಯಕ್ಕೆ ಸಂಬಂಧಿಸಿದ ಹಲವು ಬರಹಗಾರರ ಸಾಹಿತ್ಯಗಳನ್ನು ಪರಮಾರ್ಶೆ ಮಾಡಲಾಗಿದೆ. ಸಾಹಿತ್ಯ ಪರಾಮಾರ್ಶೆ ಮಾಡುವಾಗ ಕೂಡ ಕೆಲವೊಂದು ಪರಿಕಲ್ಪನೆಗಳಿಗೆ ಹೊಂದುಕೊಳ್ಳುವ ಹಾಗೆ ಅಂದರೆ ಸಾಮಾಜಿಕ ಚಲನೆ, ಶೈಕ್ಷಣಿಕ ಚಲನೆ, ಮೀಸಲಾತಿ, ಈ ರೀತಿ ಸಾಹಿತ್ಯವನ್ನು ಪರಮಾರ್ಶೆ ಮಾಡಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧವನ್ನು ಕಲ್ಪಿಸಲಾಗಿದೆ.

ಮೂರನೆಯ ಅಧ್ಯಯನ ಸಂಶೋಧನ ವಿಧಾನ: ಈ ಅಧ್ಯಯನದಲ್ಲಿ ಸಂಶೋಧಕ ಯಾವ ಮಾದರಿಯನ್ನು , ಯಾವ ರಚನೆಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು ಎಂಬುದನ್ನು ವಿಶ್ಲೇಷಿಸಲಾಗಿದೆ. ಇದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯದವರ ಜನಸಂಖ್ಯೆ ವಿಸ್ತರಣತೆ, ಇತರ ಸಮುದಾಯಗಳ ಜನಸಂಖ್ಯೆಯ ಗಾತ್ರ, ಸಂಸ್ಕೃತಿ, ಭಾಷೆ, ಆಚಾರನಂಬಿಕೆ ಮುಂತಾದವುಗಳನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಯನ ದತ್ತಾಂಶ ವಿಶ್ಲೇಷಣೆ: ಈ ಅಧ್ಯಯನದಲ್ಲಿ ಸಂಗ್ರಹಿಸಿದ ದತ್ತಾಂಶವನು ಸೈದ್ಯಾಂತಿಕವಾಗಿ ಅರ್ಥ ನೀಡುವ ರೀತಿಯಲ್ಲಿ ವರ್ಗೀಕರಣ , ಭಾಗಗಳಾಗಿ ಮಾಡಿಕೊಂಡು ಅವುಗಳನ್ನು ಅಯಾಯ ಪರಿಕಲ್ಪನೆಗಳ ಅಡಿಯಲ್ಲೇ ವಿವರಿಸಲಾಗಿದೆ. ಮಾಹಿತಿಯನ್ನು ವಿವಿಧ ಮಾದರಿಯ ಗ್ರಾಪ್, ದತ್ತಾಂಶಗಳನ್ನು ರಚಿಸುವುದರ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ಐದನೆಯ ಅಧ್ಯಯನ ಒಟ್ಟು ಅಧ್ಯಯನದ ಫಲಿತಾಂಶವನ್ನು ತಿಳಿಸಿ, ಅದಕ್ಕೆ ಪ್ರಮುಖ ಫಲಿತಗಳನ್ನು ತಿಳಿಯಪಡಿಸುವುದು ಮತ್ತು ಮರಾಟಿ ನಾಯ್ಕ್ ಬುಡಕಟ್ಟು ಸಮುದಾಯದ ಏಳಿಗೆಗಾಗಿ ಕೆಲವೊಂದು ಸಲಹೆ ಸೂಚನೆಗಳನ್ನು ನೀಡುವುದಾಗಿದೆ.

ಸಾಹಿತ್ಯ ಪರಮಾರ್ಶೆ

ವಿನಯ್ ಕೃಪಾಲ್ (1978) "ಹೈಯರ್ ಎಜ್ಯುಕೇಶನ್ ಪಾರ್ ದಿ ಶೆಡ್ಯೂಲ್ಡ್ ಕಾಸ್ಟು ಆಂಡ್ ಶೆಡ್ಯೂಲ್ಡ್ ಟ್ರೈಬ್ಸ್", ಈ ಲೇಖನದಲ್ಲಿ ಲೇಖಕರು ಬೃಹತ್ ಸಮುದಾಯಗಳಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಗಳಿಗೆ ಶೈಕ್ಷಣಿಕ ಸೌಲಭ್ಯ ಮತ್ತು ಪ್ರೋತ್ಸಾಹ ಗಳನ್ನು ಅವರ ಕಲ್ಯಾಣ ಮತ್ತು ಅಭಿವೃದ್ದಿಗಾಗಿ ಹಲವಾರು ವರ್ಷಗಳಿಂದ ನೀಡಲಾಗುತ್ತಿದ್ದರೂ ಈ ಸಮುದಾಯಗಳು ಇನ್ನು ಕೂಡಾ ಹಿಂದುಳಿದಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಲೇಖಕರು ಹಿಂದುಳಿದಿರುವಿಕೆಯ ಕಾರಣಗಳನ್ನು ಹುಡುಕಲು ಪ್ರಯತ್ನಿಸಿದ್ದಾರೆ. ಅಲ್ಲದೆ ಇಂದಿಗೂ ಕೂಡಾ ಹಲವಾರು ಉದ್ಯೋಗಗಳು ಯಾಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿವೆ ಎಂಬುದಕ್ಕೆ ಕಾರಣವನ್ನು ನೀಡುತ್ತಾ ಶಿಕ್ಷಣದ ಪ್ರಸರಣಕ್ಕೆ ಕೆಲವೊಂದು ಸಲಹೆಗಳನ್ನು ನೀಡಿದ್ದಾರೆ. ಕೊನೆಗೆ ಭಾರತೀಯ ತಂತ್ರಜ್ಞಾನ ಸಂಸ್ಥೆಯ ಒಂದು ಕೇಸ್ ಸ್ಟಡಿಯೊಂದಿಗೆ ಉಪಸಂಹಾರವನ್ನು ನೀಡಿದ್ದಾರೆ. ಲೇಖಕರ ಪ್ರಕಾರ ಪ್ರೌಡ ಶಾಲಾ ಮಟ್ಟದಲ್ಲಿ ಶಾಲೆಯನ್ನು ಬಿಟ್ಟುಬಿಡುವ ಮೂಲಕ ವಾಗಿ ಪ್ರೌಡ ಶಾಲಾ ಶಿಕ್ಷಣವನ್ನು ಪಡೆದವರ ಸಂಖ್ಯೆ ಕಡಿಮೆಯಾಗಿರುವುದು.

ಮೆಹ್ತುಬುಲ್ ಅಜಮ್ (2012) "ಇಂಟರ್ ಜನರೇಶನಲ್ ಎಜ್ಯುಕೇಶನಲ್ ಮೊಬಿಲಿಟಿ ಇನ್ ಇಂಡಿಯಾ". ಈ ಪ್ರಭಂದದಲ್ಲಿ ಲೇಖಕನು 1940 ರಿಂದ ಭಾರತದ ಸಮಾಜದಲ್ಲಿ ಶಿಕ್ಷಣವನ್ನು ಪಡೆದುದರಿಂದ ಅಂತರ್ ತಲೆಮಾರುಗಳಲ್ಲಿ ಯಾವ ರೀತಿಯ ಬದಲಾವಣೆಗಳುಂಟಾಗಿವೆ ಎಂಬುದರ ಕುರಿತಾಗಿ ವಿವರಿಸಿದ್ದಾರೆ ಮತ್ತು ಇತರ ರಾಷ್ಟ್ರಗಳಿಗೆ ಹೋಲಿಸಿ ಭಾರತ ಯಾವ ಹಂತದಲ್ಲಿದೆ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ. ಮತ್ತು ಎರಡು ತಲೆಮಾರುಗಳ ಅಂತರದಲ್ಲಿ ಶೈಕ್ಷಣಿಕ ಸಾಧನೆಯಿಂದ ಚಲನೆಯ ವಿಕಾಸ ಹೇಗೆ ಸಂಬವಿಸುತ್ತವೆ ಎಂದು ಲೇಖಕ ಪರೀಕ್ಷಿಸುತ್ತಾನೆ. ಆತನ ಸಂಶೋದನೆಯಲ್ಲಿ ತಲೆಮಾರುಗಳ ಅಂತರದಲ್ಲಿ ಶೈಕ್ಷಣಿಕ ಚಲನೆಯು ಉತ್ತಮಗೊಂಡಿದೆ. ಆದಾಗ್ಯು ಕೂಡಾ ರಾಜ್ಯದಿಂದ ರಾಜ್ಯಕ್ಕೆ ವಿಭಿನ್ನತೆಯನ್ನು ಕಾಣಬಹುದು.

ವನರಮ್ಮಾವಿ (2014) "ಎಜ್ಯುಕೇಶನ್ ಆಂಡ್ ಒಕ್ಯುಪೇಶನಲ್ ಮೊಬಿಲಿಟಿ ಎಮಂಗ್ ದಿ ಹ್ಯೂಮರ್ಸ್ ಆಪ್ ಮಣಿಪುರ", ಈ ಅಧ್ಯಯನವು ಮಣಿಪುರದ ಹೂಮರ್ ಎಂಬ ಆದಿವಾಸಿ ಸಮುದಾಯದ ಜನರ ಶಿಕ್ಷಣ ಮತ್ತು ಔದ್ಯೋಗಿಕ ಚಲನೆಯ ಬಗ್ಗೆ ಚರ್ಚಿಸುವುದು. ಅಲ್ಲದೆ ಹುಮಾರ್ ಸಮಾಜದಲ್ಲೇ ಹಲವು ಭಾಗದಲ್ಲಿಇರಬಹುದಾದ ಶೈಕ್ಷಣಿಕ ಅಸಮಾನತೆಯ ಬಗ್ಗೆ ಗಮನಹರಿಸಿದೆ. ಮಣಿಪುರದ ದಕ್ಷಿಣಭಾಗದ ಪ್ರಮುಖ 3 ಜಿಲ್ಲೆಗಳಾದ ಸೈಲ್ ಮಟ್, ಸೈದಾನ್,ಪೆರ್ಜಲ್ ನಲ್ಲಿ ಕ್ಷೇತ್ರ ಅಧ್ಯಯನ ನಡೆಸುವ ಮೂಲಕ ಅಧ್ಯಯನ ಕೈಗೊಂಡ ಲೇಖಕನ ಪ್ರಕಾರ ಹುಮಾರ್ ಆದಿವಾಸೀ ಸಮುದಾಯದ ವಿವಿದ ಭಾಗಗಳಲ್ಲಿ

ಶೈಕ್ಷಣಿಕ ಅಸಮಾನತೆ ಇದೆ. ಆಯ್ಕೆ ಮಾಡಿಕೊಂಡ 3 ಜಿಲ್ಲೆಗಳಲ್ಲಿ ಸಿಲ್ಹೇಟ್ ಜಿಲ್ಲೆಯಲ್ಲಿ ಹೆಚ್ಚಿನ ಶೈಕ್ಷಣಿಕ ಅಭಿವೃದ್ಧಿಯನ್ನು ಕಾಣಬಹುದು. ಅಲ್ಲದೆ ನಗರದ ಸೌಲಭ್ಯಗಳೂ ಇದೇ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಅಲೇಖಚಂದ್ರ ಮೊಹಾಂತಿ(2016) ಎಜ್ಯುಕೇಶನ್,ಇನ್‌ಕಮ್ ಡಿಸ್ಟ್ರಿಬ್ಯೂಶನ್,ಆಂಡ್ ಇಂಟರ್ ನ್ಯಾಶನಲ್ ಮೊಬಿಲಿಟಿ'', ಈ ಅದ್ಯಯನವು ಸಾಮಾಜಿಕ–ಆರ್ಥಿಕ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರದ ಕುರಿತು ವಿಶ್ಲೇಷಿಸುವುದು,ಇಲ್ಲಿ ಲೇಖಕರು ಶೈಕ್ಷಣಿಕ ನೀತಿಯಲ್ಲಿನ ಬದಲಾವಣೆ ಮತ್ತು ಶಿಕ್ಷಣದ ಹರಡುವಿಕೆಯು ಅಂತರ್ ತಲೆಮಾರು ಬದಲಾವಣೆ ಮತ್ತು ಉತ್ತಮ ಆರ್ಥಿಕ ವಿಸ್ತರಣೆಯನ್ನು ಸಾಧಿಸಲು ಹೇಗೆ ಸಹಾಯಕವಾಗಿದೆ ಎಂಬುದನ್ನು ಪರೀಕ್ಷಿಸುವ ಪ್ರಯತ್ನವನ್ನು ಮಾಡಿದ್ದಾರೆ.ಉನ್ನತ ಶಿಕ್ಷಣ ಮತ್ತು ಉನ್ನತ ಆದಾಯ ಗುಂಪುಗಳು ಕಡಿಮೆ ಶಿಕ್ಷಣ ಮತ್ತು ಕಡಿಮೆ ಆದಾಯ ಗುಂಪುಗಳಿಗಿಂತ ಹೆಚ್ಚಿನ ಆದಾಯ ಹಂಚಿಕೆಯನ್ನು ಪಡೆಯುತ್ತವೆ ಎಂಬುದು ಲೇಖಕರ ಅಭಿಪ್ರಾಯ.

ದತ್ತಾಂಶ ವಿಶ್ಲೇಷಣೆಯ ಪ್ರಮುಖ ಫಲಿತಾಂಶ:

ಮರಾಟಿ ನಾಯ್ಕ ರ ಸಾಮಾಜಿಕ–ಆರ್ಥಿಕ ಚಿತ್ರಣ:

►ಮರಾಟಿ ನಾಯ್ಕ್ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಗೊಂಡು ನಗರೀಕರಣ ಮತ್ತು ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಕ್ಕೆ ಉದ್ಯೋಗ, ಶಿಕ್ಷಣ ಈ ವಿಚಾರಗಳಿಂದಾದ ವಲಸೆಯಿಂದಾಗಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿದೆ. ಶೇಕಡಾ 90.50 ವಿಭಕ್ತ ಕುಟುಂಬಗಳಿದ್ದು ಅವಿಭಕ್ತ ಕುಟುಂಬಗಳ ಸಂಖ್ಯೆ ಶೇಕಡಾ 9.50ಪ್ರಮಾಣ ರಷ್ಟಿದೆ.

►ಮರಾಟಿ ನಾಯ್ಕ್ ಸಮುದಾಯದ ಹೆಚ್ಚಿನ ಜನರು ಹೆಂಚಿನ ಮನೆಗಳಲ್ಲಿ ವಾಸಿಸುತ್ತಿದ್ದು, ಇದರ ಪ್ರಮಾಣ ಶೇಕಡಾ 44.5 ಆಗಿದ್ದು, ಇವರ ಆರ್ಥಿಕ ಸ್ಥಾನಮಾನವು ಬಡ ಮತ್ತು ಮದ್ಯಮ ವರ್ಗದಲ್ಲಿ ಹಂಚಲ್ಪಟ್ಟಿದೆ. ಆರ್.ಸಿ.ಸಿ ಮನೆಗಳಲ್ಲಿ ವಾಸಿಸುತ್ತಿರುವವರ ಸಂಖ್ಯೆ ಶೇಕಡಾ 12 ಆಗಿದ್ದು, ಮರಾಟಿ ನಾಯ್ಕ್ ಸಮುದಾಯದ ಜನರಿಗೆ ಸರಕಾರದಿಂದ ವಿಬಿನ್ನ ಯೋಜನೆಗಳ ಮೂಲಕವಾಗಿ ಮನೆ ಕಟ್ಟಲು ಅವಕಾಶಗಳು ಇದ್ದಾಗ್ಯೂ ಕೂಡಾ ಈ ಸೌಲಭ್ಯಗಳನ್ನು ಪಡೆಯುವಲ್ಲಿನ ಕಠಿಣತೆ, ಅಧಿಕಾರಿಗಳ ಬ್ರಷ್ಟಾಚಾರ, ಮತ್ತು ದಾಖಲೆಗಳನ್ನು ನೀಡುವಲ್ಲಿನ ಸಮಸ್ಯೆಗಳಿಂದಾಗಿ ಈ ಯೋಜನೆಗಳು ನಿರೀಕ್ಷಿತ ಸಫಲತೆಯನ್ನು ಸಾಧಿಸಿಲ್ಲ. ಶೇಕಡಾ 3.0 ಜನರು ಬಹಳ ಕೆಳಮಟ್ಟದ ಆರ್ಥಿಕ ಪರಿಸ್ಥಿತಿಯನ್ನು ಹೊಂದಿದ್ದು, ಸಿಮೆಂಟ್ ಶೀಟ್ ನಿಂದ ನಿರ್ಮಿಸಿದ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

►ಪ್ರಸ್ತುತ ಅಧ್ಯಯನದಲ್ಲಿ ಕುಟುಂಬದ ಸದಸ್ಯರಲ್ಲಿ ಶೇಕಡಾ 58.40 ಜನ ಸ್ತ್ರೀಯರೂ, ಶೇಕಡಾ 41.60 ಜನ ಪುರುಷರ ಸಂಖ್ಯೆ ಇದ್ದು, ಪುರುಷ ಸ್ತ್ರೀ ಸಂಖ್ಯಾ ಪ್ರಮಾಣದಲ್ಲಿ ಅಂತರವಿದೆ. ಈ ಅಂತರದ

ಕಾರಣದಿಂದಾಗಿಯೂ ಕೂಡಾ ಅಂತರ್ಜಾತೀಯ ವಿವಾಹಗಳು ನಡೆಯಬಹುದಾದಂತಹ ಸನ್ನಿವೇಶಗಳು ನಿರ್ಮಿಸಲ್ಪಡುತ್ತವೆ.

►ವಿಭಕ್ತ ಕುಟುಂಬಗಳ ಸರಾಸರಿಯು ಎಲ್ಲಾ ಪ್ರದೇಶಗಳಲ್ಲೂ ಒಂದೇ ರೀತಿಯಾಗಿರದೆ ಗ್ರಾಮದಿಂದ ಗ್ರಾಮಕ್ಕೆ, ನಗರದಿಂದ ನಗರಕ್ಕೆ ವಿಭಿನ್ನವಾಗಿದೆ. ನಗರ ಪ್ರದೇಶಗಳಿಂದ ಇರುವ ವ್ಯಾಪ್ತಿ,ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ,ಆಧುನಿಕ ಸಮೂಹ –ಸಂವಹನದ ಬೆಳವಣಿಗೆ ಇವುಗಳು ಕೌಟುಂಬಿಕ ವ್ಯವಸ್ಥೆಯ ಬದಲಾವಣೆಗೆ ಕಾರಣವಾಗಿವೆ.

►ವಯೋಮಿತಿಯ ಹಂಚಿಕೆಯಲ್ಲಿ 50 ರಿಂದ 60 ವರ್ಷದ ಒಳಗಿನವರ ಸಂಖ್ಯಾ ಪ್ರಮಾಣ ಶೇಕಡಾ 36.50 ಇದ್ದು ದುಡಿತ ವರ್ಗ ಎಂದು ಪರಿಗಣಿಸಬಹುದಾದ 40 ರಿಂದ 50 ವಯಸ್ಸಿನವರೆಗಿನವರ ಪ್ರಮಾಣ ಶೇಕಡಾ 48 ರಷ್ಟಿದೆ.ಮತ್ತು 60 ವರ್ಷ ಮೇಲ್ಪಟ್ಟವರು 4 ಶೇಕಡಾರಷ್ಟಿದ್ದಾರೆ. ಇಪ್ಪತೊಂದರಿಂದ ಮೂವತ್ತು ವಯಸ್ಸಿನಲ್ಲಿ 7 ಶೇಕಡಾ ಜನರು ಕಂಡುಬರುತ್ತಾರೆ.

►ಶೇಕಡಾ 96.75 ಪ್ರಮಾಣದಷ್ಟು ಜನರು ವಿವಾಹಿತರಾಗಿದ್ದು, ಕೌಟುಂಬಿಕ ಜವಾಬ್ದಾರಿಯನ್ನು ಹೊಂದಿರುವವರೇ ಆಗಿದ್ದಾರೆ. ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

►ಶೇಕಡಾ 21 ಜನರು ಮಾತ್ರಾ ಮರಾಟಿ ಭಾಷೆಯು ತಮ್ಮ ಮಾತೃ ಭಾಷೆಯಾಗಿ ಬಳಕೆ ಮಾಡುತ್ತಿದ್ದು, ಶೇಕಡಾ 77.50 ಜನರ ಮಾತೃ ಭಾಷೆ ತುಳುವಾಗಿ ಮಾರ್ಪಾಟಾಗಿದ್ದು, ಶೇಕಡಾ 1.50 ಜನರು ಕನ್ನಡ ಭಾಷೆ ತಮ್ಮ ಮಾತೃ ಭಾಷೆ ಎಂಬುದಾಗಿ ಒಪ್ಪಿಕೊಂಡಿದ್ದು. ಮರಾಟಿ ನಾಯ್ಕ್ ಸಮುದಾಯದ ಮಾತೃ ಭಾಷೆಯಾದ ಮರಾಟಿಯು ಅವನತಿಯ ಕಡೆಗೆ ಸಾಗಿದೆ. ಇದಕ್ಕೆ ಹಲವಾರು ಕಾರಣಗಳಿದ್ದು, ಪ್ರಮುಖವಾಗಿ ಮನೆಯಲ್ಲಿನ ತಂದೆ–ತಾಯಿ ಈ ಭಾಷೆಯ ಅರಿವಿದ್ದರೂ ಕೂಡಾ ತಮ್ಮ ನಡುವಿನ ಸಂಭಾಷಣೆಯಲ್ಲಿ ಮರಾಟಿ ಭಾಷೆಯನ್ನು ಬಳಸುವ ಬದಲು ತುಳು ಭಾಷೆಯಲ್ಲಿಯೇ ವ್ಯವಹರಿಸುವುದು ಕಾರಣವಾಗಿದೆ. ಜತೆಗೆ ಮರಾಟಿ ಭಾಷೆಯನ್ನು ಮಾತನಾಡಿದಾಗ ಮರಾಟಿ ನಾಯ್ಕ್ ಎಂಬುದಾಗಿ ಸುಲಭವಾಗಿ ಗುರುತಿಸಲ್ಪಡುವ ಕಾರಣವಾಗಿ ಮುಜುಗರಕ್ಕೆ ಒಳಪಟ್ಟು, ಕೆಳಮಟ್ಟದ ಸ್ಥಾನಮಾನವನ್ನು ಪಡೆದಂತಾಗುವುದು ಎಂಬ ಮನೋಸ್ಥಿತಿ ಕೆಲವು ವಿದ್ಯಾವಂತ/ಉದ್ಯೋಗಿ ಮರಾಟಿಗರಲ್ಲಿ ಇರುವಂತಹದೂ ಒಂದು ಕಾರಣವಾಗಿದ್ದು, ಆಧುನಿಕ ಶಿಕ್ಷಣ ವ್ಯವಸ್ಥೆಯು ಕೂಡಾ ಮರಾಟಿಗರ ಮಾತೃ ಭಾಷೆಯಲ್ಲಿನ ಬದಲಾವಣೆಗೆ ಕಾರಣವಾಗಿದೆ.

►ಮರಾಟಿ ನಾಯ್ಕ್ ಸಮುದಾಯದ ಜನರು ಬೆಟ್ಟಗುಡ್ಡ ಪ್ರದೇಶಗಳಲ್ಲಿ ತಮ್ಮ ವಾಸದ ಮನೆಗಳನ್ನು ಹೊಂದಿದ್ದು, ಅಲ್ಲಿಗೆ ತೆರಳಲು ಹೆಚ್ಚಿನ ಸುರಕ್ಷಿತ ರಸ್ತೆಗಳನ್ನು ಕಾಣಲು ಸಾದ್ಯವಿಲ್ಲ. ಶೇಕಡಾ 54.50 ಜನರು

ಮಣ್ಣಿನ ರಸ್ತೆಯ ಮೂಲಕ ತಮ್ಮ ಮನೆಗಳಿಗೆ ರಸ್ತೆ ಸಂಪರ್ಕವನ್ನು ಹೊಂದಿದ್ದು , ಸುಮಾರು 6.80 ಶೇಕಡಾ ಜನರು ತಮ್ಮ ಮನೆಗಳಿಗೆ ರಸ್ತೆ ಸಂಪರ್ಕವನ್ನೇ ಹೊಂದಿಲ್ಲ.

►ಆದಾಯದ ವಿಚಾರವನ್ನು ಪರಿಗಣಿಸಿದಾಗ ಈ ಅಧ್ಯಯನದಲ್ಲಿ ಕಂಡುಬರುವಂತೆ ಶೇಕಡಾ 22.80 ಜನರು ವಾರ್ಷಿಕ 51 ಸಾವಿರಕ್ಕಿಂತ ಅಧಿಕ ಆದಾಯವನ್ನು ಹೊಂದಿದ್ದು, ಶೇಕಡಾ 56.20 ಕುಟುಂಬಗಳ ಆದಾಯ 20 ಸಾವಿರದ ಒಳಗೆ ಇದೆ ಆದ್ದರಿಂದ ಹೆಚ್ಚಿನ ಕುಟುಂಬಗಳ ಆರ್ಥಿಕ ಸ್ಥಾನಮಾನವು ಬಹಳ ಕೆಳಮಟ್ಟದಲ್ಲಿದೆ.

►ಪ್ರಸ್ತುತ ಅಧ್ಯಯನದಲ್ಲಿ ಕಂಡು ಬಂದಂತೆ ಮರಾಟಿ ನಾಯ್ಕ್ ಹೆಚ್ಚಿನ ಜನರು ಜೀವವಿಮೆಯನ್ನು ಹೊಂದಿದ್ದು, ಶೇಕಡಾ 79 ಜನರು ಜೀವವಿಮೆ ಪಾಲಿಸಿಗಳನ್ನು ಮಾಡಿಸಿಕೊಂಡಿದ್ದು, ಶೇಕಡಾ 57 ಜನರು ವಿವಿಧ ಸ್ವ-ಸಹಾಯ ಗುಂಪುಗಳಲ್ಲಿ ಉಳಿತಾಯ ಮಾಡುತ್ತಾರೆ. ಇದರಲ್ಲಿ ಪುರುಷರ ಸಂಘಗಳಿಗಿಂತಲೂ ಮಹಿಳೆಯರ ಸಂಘಗಳು ಹೆಚ್ಚಾಗಿದ್ದು, ನವೋದಯ, ಧರ್ಮಸ್ಥಳ, ಒಡಿಯೂರು, ಸ್ತ್ರೀಶಕ್ತಿ ಸ್ವ-ಸಹಾಯ ಮೊದಲಾದ ಹಲವು ಸಂಘಗಳಲ್ಲಿ ಸೇರ್ಪಡೆಗೊಂಡಿರುತ್ತಾರೆ. ಶೇಕಡಾ 38.25 ಜನರು ವಿವಿಧ ಬ್ಯಾಂಕ್‌ಗಳಲ್ಲಿ ನಿರಖು ಠೇವಣಿ, ಉಳಿತಾಯ ಖಾತೆಗಳನ್ನು ತೆರೆದು ಉಳಿತಾಯ ವನ್ನು ಮಾಡುತ್ತಾರೆ. ಶೇಕಡಾ 34 ಜನರು ತಮ್ಮ ಹತ್ತಿರದ ಅಂಚೆಕಚೇರಿಗಳಲ್ಲಿ ಉಳಿತಾಯ ಯೋಜನೆಗಳಿಗೆ ಸೇರುವ ಮೂಲಕ ಉಳಿತಾಯ ಪ್ರಕ್ರಿಯೆಯಲ್ಲಿ ಭಾಗಿಗಳಾದರೆ ಶೇಕಡಾ 5 ಜನರು ಸ್ಥಳೀಯವಾಗಿ ಜನರು ಸೇರಿಕೊಂಡು ಮಾಡುವ ಚೀಟಿ ವ್ಯವಹಾರ, (ಕುರಿ/ಕುದಿ/ನರ್ತೆ) ಮೊದಲಾದುವುಗಳಲ್ಲಿ ಹಣ ವಿನಿಯೋಗಿಸುವ ಮೂಲಕ ತಮ್ಮ ಕಷ್ಟಕಾಲಕ್ಕೆ ಅವುಗಳು ನೆರವಾಗಬಹುದೆಂಬ ನಂಬಿಕೆಯಲ್ಲಿರುತ್ತಾರೆ.

►ಹೆಚ್ಚಿನ ಜನರು ಮನೆ ನಿರ್ಮಾಣಕ್ಕಾಗಿ ಸಾಲವನ್ನು ತೆಗೆದುಕೊಂಡಿದ್ದು ಇವರ ಪ್ರಮಾಣ ಶೇಕಡಾ 43 ರಷ್ಟಿರುವುದು. ಬ್ಯಾಂಕ್ ಗಳಿಂದ ಸಾಲ ಪಡೆದವರ ಸಂಖ್ಯೆಯು ಅಧಿಕವಾಗಿದ್ದು, ಜತೆಗೆ ಸಮುದಾಯಕ್ಕೆ ಪಂಚಾಯತ್ ರಾಜ್ ಇಲಾಖೆಯಿಂದ ಮನೆ ನಿರ್ಮಾಣದ ಅವಕಾಶಗಳು ಕೂಡಾ ದೊರಕುತ್ತಿದ್ದು ಬಡ ಜನರ ಸ್ವಂತ ಮನೆಯನ್ನು ಹೊಂದುವ ಕನಸಿಗೆ ಸಹಾಯವನ್ನಿತ್ತಿದೆ.ಶೇಕಡಾ 26.50 ಸಾಲವು ಕೃಷಿ ಸಂಬಂಧಿ ಸಾಲವಾಗಿದ್ದು,ತೋಟ ವಿಸ್ತರಣೆ,ಗೊಬ್ಬರ,ಕ್ರಿಮಿನಾಶಕ ಸಿಂಪಡಣೆ,ಸೊಪ್ಪು ಹಾಕುವುದು,ಮೊದಲಾದ ವಿಚಾರಗಳಿಗೆ ಮಾಡಲಾದ ಸಾಲವಾಗಿದೆ.ಶೇಕಡಾ 18.50 ಸಾಲವು ವಿವಾಹ ಸಂಬಂದೀ ಸಾಲವಾಗಿದ್ದು, ಶೇಕಡಾ 8.75 ಶಿಕ್ಷಣ ಅಥವಾ ವಿದ್ಯಾಭ್ಯಾಸದ ಸಾಲವಾಗಿದೆ. ಶೇಕಡಾ 8.25 ಜನರು ಸ್ವಂತ ವಾಹನವನ್ನು ಹೊಂದುವ ಉದ್ದೇಶದಿಂದ ಸಾಲವನ್ನು ಪಡೆದಿದ್ದು, ಆಧುನಿಕ ಉದ್ಯೋಗಗಳನ್ನು ನಡೆಸುವ ಯುವ ಸಮುದಾಯದ ಜನರಿಗೆ ತಮ್ಮ ವಾಸ ಸ್ಥಾನಗಳಿಗೆ ಬೇಕಾದ ಸಮಯದಲ್ಲಿ ಸಾರಿಗೆ ಸಂಪರ್ಕವಿಲ್ಲದಿರುವ ಸಮಯದಲ್ಲಿ ದ್ವಿಚಕ್ರ ವಾಹನ ಅನಿವಾರ್ಯ ಎಂಬ ಕಾರಣದಿಂದ ಈ ಸಾಲವನ್ನು ಮಾಡಲಾಗಿರುತ್ತದೆ.ಶೇಕಡಾ 7.25 ಜನರು ಸಣ್ಣಪುಟ್ಟ ವ್ಯಾಪಾರ ವಹಿವಾಟಿಗಳಿಗಾಗಿ ಸಾಲವನ್ನು ಪಡೆದಿದ್ದು, ಶೇಕಡಾ 3.50 ಜನರು ಆರೋಗ್ಯ ಸುಧಾರಣೆಗಾಗಿ

ಸಾಲವನ್ನು ಮಾಡಿರುತ್ತಾರೆ, ಕೆಲವೊಂದು ಭೀಕರ ಕಾಯಿಲೆಗಳಿಗೆ ತುತ್ತಾದಂತಹ ಸಂದರ್ಭದಲ್ಲಿ ನಗರ ಪ್ರದೇಶಗಳ ಖಾಸಗೀ ಆಸ್ಪತ್ರೆಗಳಲ್ಲಿ ಮಾತ್ರಾ ಉತ್ತಮ ಚಿಕಿತ್ಸೆಯು ದೊರೆಯುವ ಕಾರಣದಿಂದಾಗಿ ಈ ಸಾಲದ ಪ್ರಮಾಣ ಏರಿಕೆಯಾಗಿದೆ ಇದಕ್ಕಾಗಿ ತಮ್ಮಲ್ಲಿರುವ ಚಿನ್ನವನ್ನು ಅಡವಿಟ್ಟು ಸಾಲ ಪಡೆದವರ ಪ್ರಮಾಣವು 2.75 ಶೇಕಡಾ ಇದ್ದು, ಕಡೆಗೆ ಸಾಲವನ್ನು ತೀರಿಸಲಾಗದೆ ಇವುಗಳನ್ನು ಕಳೆದುಕೊಂಡವರೂ ಇದ್ದಾರೆ. ನೀರಾವರಿಯ ಉದ್ದೇಶಕ್ಕಾಗಿ ಅಂದರೆ ಕೊಳವೆ ಬಾವಿ ತೆಗೆಸಲು, ಪೈಪು ಹಾಕಿಸಲು, ಮತ್ತು ಸಾಲ ಮರುಪಾವತಿಗಾಗಿ, ಮತ್ತೂ ಕೆಲವರು ಸಾಂಪ್ರಾದಾಯಿಕ ಆಚರಣೆಗಳ ಉದ್ದೇಶದಿಂದ ಸಾಲಗಾರರಾಗಿದ್ದಾರೆ.

►ಈ ಅಧ್ಯಯನದಲ್ಲಿ ಕಂಡುಬಂದಂತೆ ಶೇಕಡಾ 11.25 ಜನರು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದು, ಶೇಕಡಾ 13.5 ಜನರು ಪ್ರೌಡ ಶಿಕ್ಷಣವನ್ನು ಪಡೆದಿದ್ದು, ಶೇಕಡಾ 17.75 ಜನರು ಪಿ.ಯು.ಸಿ. ಮತ್ತು ಶೇಕಡಾ12.75 ಜನರು ಸ್ನಾತಕೋತ್ತರ ಪದವಿಯನ್ನು ಹೊಂದಿದ್ದು ಅನಕ್ಷರಸ್ಥರ ಶೇಕಡಾವಾರು 3.25 ಪ್ರಮಾಣ ರಷ್ಟಿದೆ. ಆದರೆ ಶೇಕಡಾ 8.25 ಜನರು ಉದ್ಯೋಗ ಪ್ರದಾನವಾದ ಔದ್ಯೋಗಿಕ ಶಿಕ್ಷಣವನ್ನು ಪಡೆಯುತ್ತಿದ್ದು, ಶೇಕಡಾ 1.25 ಜನರು ತಾಂತ್ರಿಕ ಶಿಕ್ಷಣ ಪಡೆದಿದ್ದಾರೆ. ಪ್ರಾಚೀನ ತಲೆಮಾರಿಗೆ ಪ್ರಸ್ತುತ ತಲೆಮಾರನ್ನು ಹೋಲಿಸಿದಾಗ ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮರಾಟಿ ನಾಯ್ಕ್ ಸಮುದಾಯದಲ್ಲಿ ಶೈಕ್ಷಣಿಕ ಚಲನೆಯನ್ನು ಸೂಚಿಸುತ್ತದೆ.

►ಹೆಚ್ಚಿನ ಸಂಖ್ಯೆಯ ಮಾಹಿತಿದಾರರು ಅಂದರೆ ಶೇಕಡಾ 27.75 ಜನರು ವಿವಿಧ ಖಾಸಗೀ ಕಂಪನಿಗಳಲ್ಲಿ ಉದ್ಯೋಗಿಗಳಾಗಿದ್ದು, ಶೇಕಡಾ 17.75 ಜನರು ಸರಕಾರೀ/ಅರೆಸರಕಾರೀ ಗುಮಾಸ್ತ ಉದ್ಯೋಗವನ್ನು ಹೊಂದಿದ್ದು, ಶೇಕಡಾ 10.25 ಜನರು ಜವಾನರಾಗಿ ಉದ್ಯೋಗ ನಿರ್ವಹಿಸುತ್ತಿದ್ದಾರೆ. ಶೇಕಡಾ 9.5 ಜನರು ವ್ಯವಸಾಯ ಸಂಬಂದೀ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಕೇವಲ 3.75 ಶೇಕಡಾ ಜನರು ವಿವಿಧ ಇಲಾಖೆಗಳಲ್ಲಿ ಆಫೀಸರ್ ಗಳಾಗಿ ಉದ್ಯೋಗ ನಿರ್ವಹಿಸುತ್ತಿದ್ದಾರೆ. ಇದು ಉದ್ಯೋಗಗಳಲ್ಲಿನ ಬದಲಾವಣೆಯನ್ನು ಸೂಚಿಸುವುದು, ಮತ್ತು ಮರಾಟಿ ನಾಯ್ಕ್ ಸಮುದಾಯದಲ್ಲಿ ಸಾಂಪ್ರಾದಾಯಿಕ ಉದ್ಯೋಗದಿಂದ ಆಧುನಿಕ ಉದ್ಯೋಗದ ಕಡೆಗೆ ಔದ್ಯೋಗಿಕ ಚಲನೆ ಹೆಚ್ಚಿದ ರೀತಿಯಲ್ಲಿ ಸಂಬವಿಸುತ್ತಿರುವುದನ್ನು ತಿಳಿಯಪಡಿಸುತ್ತದೆ.

ಸಾಂಪ್ರದಾಯಿಕ ಉದ್ಯೋಗ ಮತ್ತು ಸಾಂಸ್ಕೃತಿಕ ಚಲನೆ.

►ಅಧ್ಯಯನವು ನಿಖರವಾಗಿ ಹೇಳುವಂತೆ ದಕ್ಷಿಣ ಕನ್ನಡ ಜಿಲ್ಲೆಯ ಮರಾಟಿ ನಾಯ್ಕ್ ಸಮುದಾಯದ ಸಾಂಪ್ರದಾಯಿಕ ಉದ್ಯೋಗವು ಕುಮೇರಿ ಬೇಸಾಯವಾಗಿತ್ತು, ಪ್ರಸ್ತುತ ತಲೆಮಾರಿನಲ್ಲಿ ಈ ಉದ್ಯೋಗವನ್ನು ಅವಲಂಬಿಸಿರುವವರ ಸಂಖ್ಯೆಯು ನಗಣ್ಯವಾಗಿದ್ದು, ದ್ವಿತೀಯ ಮತ್ತು ತೃತೀಯ ತಲೆಮಾರಿನಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡವರ ಸಂಖ್ಯೆಯು 40.75 ಶೇಕಡಾರಷ್ಟಿದೆ. ಮತ್ತು ಆಧುನಿಕ ಉದ್ಯೋಗಗಳ ಕಡೆಗೆ

ಸಮುದಾಯದ ಜನರು ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಔದ್ಯೋಗಿಕ ಚಲನೆ ಸಂಭವಿಸಿವೆ ಎಂಬ ವಿಚಾರವನ್ನು ಪ್ರಸ್ತುತಪಡಿಸುತ್ತದೆ.

►ಮರಾಟಿ ನಾಯ್ಕ್ ಸಮುದಾಯಕ್ಕೆ ಸಂಬಂಧಪಟ್ಟ ವಿಶೇಷ ಆಚರಣೆಗಳನ್ನು ಹೆಚ್ಚಿನ ಎಲ್ಲಾ ಜನರು ವಿವಿಧ ಸಂದರ್ಭಗಳಲ್ಲಿ ಆಚರಿಸಿಸುತ್ತಿದ್ದು, ಪ್ರದೇಶದಿಂದ ಪ್ರದೇಶಕ್ಕೆ ಕೆಲವು ಆಚರಣೆಗಳಲ್ಲಿ ವ್ಯತ್ಯಾಸವನ್ನು ಜಿಲ್ಲೆಯ ಒಳಗಡೆಯೇ ಗುರುತಿಸಲು ಸಾದ್ಯವಿದೆ.

ಸಾಂಪ್ರದಾಯಿಕ ಉದ್ಯೋಗದಿಂದ ಆಧುನಿಕ ಉದ್ಯೋಗದ ಕಡೆಗೆ:

►ಮರಾಟಿ ನಾಯ್ಕ್ ಸಮುದಾಯದ ಹೆಚ್ಚಿನ ಜನರು ಆಧುನಿಕ ಶಿಕ್ಷಣ ವ್ಯವಸ್ಥೆಯ ಸದುಪಯೋಗದಿಂದ ಸರಕಾರೀ, ಖಾಸಗೀ ವಲಯ, ಮತ್ತು ವ್ಯಾಪಾರ ಇಂತಹ ಉದ್ಯೋಗಗಳಲ್ಲೂ, ಮತ್ತು ಯಾವುದೇ ಒಬ್ಬ ಸದಸ್ಯನೂ ಸಾಂಪ್ರಾದಾಯಿಕ ಕುಮೇರಿ ಬೇಸಾಯ ಪದ್ದತಿಯ ಉದ್ಯೋಗದಲ್ಲಿ ತೊಡಗಿರದೇ ಇರುವುದನ್ನಿಲ್ಲಿ ಗುರುತಿಸಬಹುದು, ಇದು ಮರಾಟಿ ನಾಯ್ಕ್ ಸಮುದಾಯದ ಔದ್ಯೋಗಿಕ ಬದಲಾವಣೆ ಮತ್ತು ಔದ್ಯೋಗಿಕ ಚಲನೆಯನ್ನು ಸೂಚಿಸುತ್ತದೆ. ಈ ಬದಲಾವಣೆಯು ಇತರ ಜಾತಿಗಳನ್ನು ಆಧರಿಸಿ ಸಂಸ್ಕೃತಾನುಕರಣದ ಒಂದು ಪ್ರಕ್ರಿಯೆಯಂತೆ ಸಂಭವಿಸಿದೆ.

►ಭೂಮಿಯ ಒಡೆತನಕ್ಕೆ ಸಂಬಂದಿಸಿದಂತೆ ಪ್ರಥಮ ಮತ್ತು ತೃತೀಯ ತಲೆಮಾರುಗಳ ಜನರಿಗಿಂತ ದ್ವಿತೀಯ ತಲೆಮಾರಿನ ಜನರು ಹೆಚ್ಚಿನ ಭೂಮಿಯ ಒಡೆತನವನ್ನು ಹೊಂದಿರುವುದು ಕಂಡುಬಂದಿದ್ದು, ಪ್ರಥಮ ತಲೆಮಾರಿನ ಜನರು ಕೃಷಿ ಸಂಬಂಧೀ ಕೆಲಸಗಳಿಂದ ವಿಮುಖ ಗೊಳ್ಳುತ್ತಿರುವುದನ್ನು ಸೂಚಿಸುತ್ತದೆ ಅಲ್ಲದೆ ತೃತೀಯ ತಲೆಮಾರಿನ ಜನರು ಇತರ ಜಾತಿಯ ಭೂ ಒಡೆಯರಲ್ಲಿ ಕೂಲಿಕಾರ್ಮಿಕರಾಗಿದ್ದರೇ ಹೊರತು ಆದರ ಒಡೆತನವನ್ನು ಪಡೆಯುವಷ್ಟು ಜಾಗೃತರಾಗಿರಲಿಲ್ಲ ಮತ್ತು ಮುಗ್ದತೆಯಿಂದಾಗಿ ಇತರ ಜಾತಿಗಳ ಒಡೆತನಕ್ಕೆ ನೀಡುತ್ತಿದ್ದರು.

►ಶೇಕಡಾ 13.25 ಜನರು ವೃತ್ತಿ ಸಂಬಂಧಿತ ತರಭೇತಿ ಮತ್ತು ಸಹಾಯಕ್ಕಾಗಿ ಸರಕಾರದ ಸಹಾಯವನ್ನು ಪಡೆದಿದ್ದು, ಶೇಕಡಾ 34.75 ಜನರು ಸರಕಾರದಿಂದ ಮುಂಭಡ್ತಿಗೆ ಮೀಸಲಾತಿಯ ಸಹಾಯವನ್ನು ಪಡೆದಿದ್ದಾರೆ.

►ಶೇಕಡಾ 31.75 ಜನರಿಗೆ ಕೃಷಿ ಸಂಬಂಧೀ ಚಟುವಟಿಕೆಗಳಾದ ಯಂತ್ರೋಪಕರಣಗಳ ಖರೀದಿ ಸಹಾಯದನ,ರಸಗೊಬ್ಬರ,ಕೀಟನಾಶಕ ಬಳಕೆಗೆ, ನೀರಾವರಿ ಪಂಪುಸೆಟ್ಟುಗಳ ಖರೀದಿ, ಗಿಡಗಳ ಖರೀದಿ ಮೊದಲಾದವುಗಳಿಗೆ ಮೀಸಲಾತಿಯಿಂದಾಗಿ ಸಹಾಯವಾಗಿದ್ದು, ಇನ್ನೂ ಕೆಲವರು ಸರಿಯಾದ ಧಾಖಲೆ ಪತ್ರಗಳನ್ನು ಹೊಂದಿರದೇ ಇರುವ ಕಾರಣ ಮೀಸಲಾತಿಯ ಸದುಪಯೋಗವನ್ನು ಪಡೆಯಲು ಅಸಾದ್ಯವಾಗಿದೆ. ಶೇಕಡಾ 13.25 ರಷ್ಟು ತರಭೇತಿಗಳನ್ನು ಪಡೆಯಲು ಮೀಸಲಾತಿಯು ಸಹಾಯಕವಾಗಿದ್ದು, ಕಂಪ್ಯೂಟರ್

ತರಬೇತಿ,ಹೊಲಿಗೆ ತರಭೇತಿ, ವಾಹನಾ ಚಾಲನಾ ತರಭೇತಿ,ಮೊದಲಾದ ತರಭೇತಿಗಳನ್ನು ಪಡೆದಿದ್ದಾರೆ. ಶೇಕಡಾ 11.25 ಜನರಿಗೆ ಮೀಸಲಾತಿಯು ಮುಂಭಡ್ತಿಯನ್ನು ಪಡೆಯಲು ಸಹಾಯವನ್ನೊದಗಿಸಿದೆ. ಪ್ರಸ್ತುತ ಭಾರತದ ಸರ್ವೋಚ್ಚ ನ್ಯಾಯಲಯವು ಈ ರೀತಿಯ ಮುಂಭಡ್ತಿಯಲ್ಲಿ ಮೀಸಲಾತಿಯನ್ನು ತಡೆಹಿಡಿದಿರುವುದು ಹಿಂದುಳಿದ ಜಾತಿಗಳ ಔದ್ಯೋಗಿಕ ಅಬಿವೃದ್ದಿಯಲ್ಲಿ ತೊಡಕಾಗಿದೆ.

ಶೈಕ್ಷಣಿಕ ಚಲನೆ:

►ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಂತೆ ಮರಾಟಿ ನಾಯ್ಕ್ ಸಮುದಾಯದ ಪ್ರಥಮ ತಲೆಮಾರಿನ ಜನರು ಶಿಕ್ಷಣದ ಜಾಗೃತಿಯನ್ನು ಪಡೆದಿದ್ದು ತಮ್ಮ ಸರ್ವತೋಮುಖ ಅಭಿವೃದ್ದಿಗೆ ಬೇಡಿಕೆಯ ಶಿಕ್ಷಣ ಕ್ರಮಗಳಾದ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿದಾಯಕರಾಗಿದ್ದು, ಶೇಕಡಾ 6.80 ಜನರು ಔದ್ಯೊಗಿಕ ಶಿಕ್ಷಣ ಪಡೆದವರಾಗಿದ್ದು, ಶೇಕಡಾ 1.50 ಜನರು ತಾಂತ್ರಿಕ ಶಿಕ್ಷಣವನ್ನು ಪಡೆದಿದ್ದಾರೆ.

►ಶೇಕಡಾ 74.40 ಜನರು ತಮ್ಮ ಮಕ್ಕಳಿಗೆ ಗ್ರಾಮೀಣ ಭಾಗದಲ್ಲಿ ಲಭ್ಯವಾಗುವ ಶಿಕ್ಷಣವನ್ನು ನೀಡಲು ಆಸಕ್ತಿದಾಯಕರಾಗಿದ್ದು, ಶೇಕಡಾ 25.60 ಶೇಕಡಾ ಜನರು ನಗರ ಕೇಂದ್ರಿತ ಶಿಕ್ಷಣವನ್ನು ನೀಡಬಯಸಿದ್ದಾರೆ, ನಗರ ಕೇಂದ್ರಿತ ಶಿಕ್ಷಣಕ್ಕೆ ಹೆಚ್ಚಿನ ವ್ಯಯದ ಅಗತ್ಯತೆ ಇರುವುದೇ ಈ ನಿರ್ದಾರಕ್ಕೆ ಬರಲು ಕಾರಣವಾಗಿದೆ. ಶೇಕಡಾ 71 ಜನರು ಕನ್ನಡ ಮಾಧ್ಯಮದ ಶಿಕ್ಷಣವನ್ನೂ, ಶೇಕಡಾ 29 ಜನರು ಇಂಗ್ಲಿಷ್ ಮಾದ್ಯಮದ ಶಿಕ್ಷಣವನ್ನು ತಮ್ಮ ಮುಂದಿನ ಪೀಳಿಗೆಯ ಜನರಿಗೆ ನೀಡಲು ಬಯಸಿದ್ದಾರೆ.

►ಶೇಕಡಾ 34.80 ಜನರು ಔದ್ಯೋಗಿಕ ಶಿಕ್ಷಣದ ಕಡೆಗೂ ಶೇಕಡಾ 65.20 ಜನರು ಸಾಂಪ್ರಾದಾಯಿಕ ಮಾದರಿಯ ಶಿಕ್ಷಣ ಮಾದರಿಯ ಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಸೇರಿಸಬಯಸಿದ್ದಾರೆ.

ಮರಾಟಿ ನಾಯ್ಕ್ ಸಮುದಾಯದ ರಾಜಕೀಯ ಭಾಗವಹಿಸುವಿಕೆ.

►ಹೆಚ್ಚಿನ ಸಂಖ್ಯೆಯ ಮರಾಟಿ ನಾಯ್ಕ್ ಸಮುದಾಯದ ಜನರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಪಕ್ಷ ಮತ್ತು ರಾಜಕೀಯ ನಾಯಕರಿಗೆ ತಮ್ಮ ಬೆಂಬಲವನ್ನು ನೀಡುತ್ತಿದ್ದಾರೆ. ಅಲ್ಲದೆ ಜಿಲ್ಲೆಯಲ್ಲಿ ಈಗಾಗಲೇ ಹೆಸರು ಗಳಿಸಿರುವ ಪಕ್ಷದ ಕಡೆಗೆ ಹೆಚ್ಚಿನ ಒಲವನ್ನು ಹೊಂದಿದ್ದಾರೆ. ಶೇಕಡಾ 36 ಜನರು ರಾಜಕೀಯ ಪಕ್ಷದ ಅಭ್ಯರ್ಥಿಗೆ, ಜಾತಿಯ ಬದಲಾಗಿ ಸಮಾಜ ದ ಅಬಿವೃದ್ದಿಯ ದೃಷ್ಟಿಕೋನದಿಂದ ಪ್ರಾಮಾಣಿಕವಾಗಿ ಮತ್ತು ಕಠಿಣ ಕೆಲಸ ಮಾಡುವ ಜನ ನಾಯಕರಿಗೆ ತಮ್ಮ ಬೆಂಬಲವನ್ನು ನೀಡುವ ಮನೋಧರ್ಮವನ್ನು ಹೊಂದಿದ್ದಾರೆ.

►ಮರಾಟಿ ನಾಯ್ಕ್ ಸಮುದಾಯದ ಜನರು ರಾಜಕೀಯ ನೇತಾರರ ಆಯ್ಕೆಯಲ್ಲಿ ಆ ನೇತಾರರ ಆಡಳಿತ ವನ್ನು ಪರಿಗಣಿಸಿ ಆಯ್ಕೆಮಾಡುತ್ತಾರೆ .ಉತ್ತಮ ಆಡಳಿತವನ್ನು ನೀಡಿದಂತಹ ಸಂದರ್ಭದಲ್ಲಿ ಸುಮಾರು 82.5 ಶೇಕಡಾ ಜನರು ಅವರ ಆಯ್ಕೆಯನ್ನು ಬಯಸುತ್ತಿದ್ದಾರೆ.

►ಶೇಕಡಾ 11.5 ಕುಟುಂಬ ಸದಸ್ಯರು ಮಾತ್ರಾ ರಾಜಕೀಯ ಕ್ಷೇತ್ರಗಳ ವಿವಿಧ ಹಂತಗಳಲ್ಲಿ ರಾಜಕೀಯ ಧುರೀಣರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅದರಲ್ಲೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಾಗೂ ವಿವಿದ ಸಹಕಾರಿ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನೀಡಲೇಬೇಕಾದ ಅನಿವಾರ್ಯತೆ ಇರುವ ಕಾರಣದಿಂದಾಗಿ ರಾಜಕೀಯ ಪಕ್ಷಗಳ ಮಾತನ್ನು ಚಾಚೂ ತಪ್ಪದೆ ಪಾಲಿಸುವಂತಹ ವ್ಯಕ್ತಿಗಳಷ್ಟೇ ಈ ಕ್ಷೇತ್ರಗಳಲ್ಲಿ ರಾಜಕೀಯ ಧುರೀಣರಾಗಿ ನೇಮಿಸಲಾಗುತ್ತದೆ. ಆದರೆ ರಾಜ್ಯ ವಿಧಾನ ಸಭಾ ಅಥವಾ ಪರಿಷತ್ತು ಮತ್ತು ಕೇಂದ್ರ ಲೋಕಸಭಾ ಅಥವಾ ರಾಜ್ಯಸಭಾ ಗಳಲ್ಲಿ ಯಾವೊಬ್ಬ ಮರಾಟಿ ನಾಯ್ಕ್ ಸಮುದಾಯದ ವ್ಯಕ್ತಿಯ ಪ್ರತಿನಿಧಿತ್ವ ಇಲ್ಲವಾಗಿದೆ.

►ರಾಜಕೀಯ ಸಹಭಾಗಿತ್ವದಲ್ಲಿ ಹಿಂದಿನ ತಲೆಮಾರುಗಳಿಗಿಂತ ಪ್ರಸ್ತುತ ತಲೆಮಾರಿನ ಸಂಖ್ಯೆ ಅಧಿಕವಾಗಿದ್ದಾಗ್ಯೂ ಕೂಡಾ ಕೇವಲ 11.5 ಶೇಕಡಾ ಜನರು ರಾಜಕೀಯ ನೇತಾರರಾಗಿದ್ದಾರೆ.

►ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಮೀಸಲಾತಿಯ ಕಾರಣದಿಂದಾಗಿ ಪಂಚಾಯತ್ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಸ್ತ್ರೀ ಪುರುಷರ ಸಂಖ್ಯಾ ಪ್ರಮಾಣ ಸಮಾನವಾಗಿದ್ದು, ಆದರೆ ಅಂತಿಮ ತೀರ್ಮಾನ ತೆಗೆದುಕೊಳ್ಳುವಲ್ಲಿ ಈ ಸಮುದಾಯದ ಸ್ತ್ರೀಯರ ಅಭಿಪ್ರಾಯಗಳಿಗೆ ಮನ್ನಣೆ ಇಲ್ಲವಾಗಿದೆ. ಕೇವಲ ತಳ ಹಂತದ ರಾಜಕೀಯ ವ್ಯವಸ್ಥೆಯಲ್ಲಿ ಮರಾಟಿ ನಾಯ್ಕ್ ಸಮುದಾಯದ ರಾಜಕೀಯ ಸಹಭಾಗಿತ್ವ ಕಂಡುಬರುತ್ತಿದ್ದು, ಮೀಸಲಾತಿಯ ಹೊರತಾಗಿ ಯಾವೊಂದು ರಾಜಕೀಯ ಪಕ್ಷವೂ ಕೂಡಾ ಈ ಸಮುದಾಯದ ಜನರನ್ನು ಅಭ್ಯರ್ಥಿಯಾಗಿ ಆಯ್ಕೆಗೆ ಪರಿಗಣಿಸಿಲ್ಲ.

►ಪಂಚಾಯತ್ ರಾಜ್ ವ್ಯವಸ್ಥೆಗೆ ಚುನಾಯಿಸಲ್ಪಟ್ಟ ಶೇಕಡಾ 11. 5 ಜನರಲ್ಲಿ ಶೇಕಡಾ 69.60 ಜನರು ಗ್ರಾಮ ಪಂಚಾಯತ್ ಸದಸ್ಯರಾಗಿ ಆಯ್ಕೆಗೊಂಡವರಾಗಿದ್ದು, ಶೇಕಡಾ 8.70 ಜನರು ಮೀಸಲಾತಿಯ ಕಾರಣದಿಂದಾಗಿ ಗ್ರಾಮ ಪಂಚಾಯತ್ ಅಧ್ಯಕ್ಷ ಗಾದಿಯನ್ನು ಅಲಂಕರಿಸಿದವರಾಗಿದ್ದಾರೆ. ಶೇಕಡಾ 6.50 ಜನರು ತಾಲೂಕು ಪಂಚಾಯತ್ ಸದಸ್ಯರಾಗಿ ಆಯ್ಕೆಯಾದವರಾಗಿದ್ದು, ಶೇಕಡಾ 15.20 ಜನರು ವಿವಿಧ ಸಹಕಾರೀ ಸಂಘಗಳಲ್ಲಿ ಸದಸ್ಯ ಅಥವಾ ನಿರ್ದೇಶಕರಾಗಿ ಆಯ್ಕೆಯಾದವರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದು ತಾಲುಕು ಪಂಚಾಯತುಗಳು, 230 ಗ್ರಾಮ ಪಂಚಾಯತುಗಳು ಇದ್ದು ಇದರಲ್ಲಿ ಮರಾಟಿ ನಾಯ್ಕ್ ಸಮುದಾಯದ ಚುನಾಯಿತ ಪ್ರತಿನಿದಿಗಳ ಸಂಖ್ಯೆ ಮೀಸಲಾತಿಯ ಹೊರತಾಗಿ ಕಾಣಲು ಸಾದ್ಯವಿಲ್ಲ. ಮತ್ತು

ಇತರ ಜಾತಿಗಳಿಗೆ ಹೋಲಿಕೆ ಮಾಡಿದಾಗ ಈ ಸಮುದಾಯದ ರಾಜಕೀಯ ಪ್ರತಿನಿದಿತ್ವ ಬಹಳ ಕಡಿಮೆಯಾಗಿದೆ.

►ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯಕ್ಕೆ ಒಳಪಡಿಸಿದ 400 ಮನೆಗಳಲ್ಲಿ ಶೇಕಡಾ 14.57 ಪುರುಷ ಮತ್ತು 70.14 ಮಹಿಳಾ ಮಾಹಿತಿದಾರರು ಇನ್ನೂ ಕೂಡಾ ತಮ್ಮ ಜಾತಿಯನ್ನು ಬಲಪಡಿಸಲು ಕಾರ್ಯ ನಿರ್ವಹಿಸಬೇಕಾದಂತಹ ಮರಾಟಿ ಸಂಘಗಳ ಸದಸ್ಯತ್ವವನ್ನು ಪಡೆದುಕೊಂಡಿಲ್ಲ. ಶೇಕಡಾ 78.89 ಪುರುಷ ಮತ್ತು 27.86 ಮಹಿಳಾ ಮಾಹಿತಿದಾರರು ಮರಾಟಿ ಸಂಘ ದ ಸದಸ್ಯತ್ವವನ್ನು ಪಡೆದುಕೊಂಡಿದ್ದು, ಇಂತಹ ಸಂಘಟನೆಗಳಲ್ಲಿ ಜನರಿಗೆ ವಿಶ್ವಾಸವಿಲ್ಲದಿರುವುದೇ ಸದಸ್ಯತ್ವವನ್ನು ಪಡೆಯದಿರುವುದಕ್ಕೆ ಕಾರಣವಾಗಿದೆ. ಶೇಕಡಾ 4.2 ಪುರುಷ ಮತ್ತು 0.99 ಮಹಿಳಾ ಮಾಹಿತಿದಾರರು ಜಾತಿ ಸಂಘಟನೆಯ ವಿವಿಧ ಹಂತಗಳಲ್ಲಿ ಕಾರ್ಯದರ್ಶಿಯಾಗಿ ಕಾರ್ಯವನ್ನು ನಿರ್ವಹಿಸಿದ್ದು, ಶೇಕಡಾ 2.01 ಪುರುಷ ಮಾಹಿತಿದಾರರು ವಿವಿಧ ಹಂತಗಳ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ. ಪ್ರಸ್ತುತ ಸಾಮಾಜಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಸ್ವಸಹಾಯ ಸಂಘಗಳಲ್ಲಿ ಶೇಕಡಾ 74.62 ಮಹಿಳಾ ಮಾಹಿತಿದಾರರು ಸದಸ್ಯತ್ವವನ್ನು ಪಡೆದುಕೊಂಡಿದ್ದು, ಶೇಕಡಾ 92.46 ಪುರುಷರು ಸದಸ್ಯತ್ವವನ್ನು ಪಡೆದುಕೊಂಡಿಲ್ಲ. ಜನರಲ್ಲಿಇರುವ ಸಂಶಯದ ಮನೋಭಾವನೆ ಮತ್ತು ಸಂಘರ್ಷದ ಚಟುವಟಿಕೆಗಳು ಮತ್ತು ನಿರಾಸಕ್ತಿ ಈ ರೀತಿಯ ಸಹಕಾರೀ ತತ್ವದ ಸಂಘಟನೆಗಳಲ್ಲಿ ಸದಸ್ಯತ್ವ ಪಡೆಯದೇ ಇರಲು ಕಾರಣವಾಗಿವೆ. ಶೇಕಡಾ 3.48 ಮಹಿಳೆಯರು ಸ್ವ-ಸಹಾಯ ಸಂಘಗಳಲ್ಲಿ ಕಾರ್ಯದರ್ಶಿಯಾಗಿ ಕೆಲಸ ಕಾರ್ಯ ನಿರ್ವಹಿಸಿದ್ದು, ಶೇಕಡಾ 4.97 ಸ್ತ್ರೀಯರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದವರಾಗಿದ್ದಾರೆ. ಇಂತಹ ಸಂಘಟನೆಗಳು ಜನರಲ್ಲಿ ವ್ಯಕ್ತಿತ್ವವನ್ನು ರೂಪಿಸುವುದರ ಜತೆಗೆ ವ್ಯವಹಾರ ಜ್ಞಾನವನ್ನು ಬೆಳೆಸುತ್ತವೆ. ಅಲ್ಲದೆ ಸ್ವ- ಸಹಾಯ ಸಂಘಗಳಲ್ಲಿ ಉಳಿತಾಯ ಯೋಜನೆಗೆ ಹೆಚ್ಚಿನ ಪ್ರಾಮುಖ್ಯತೆ ಇರುವ ಕಾರಣದಿಂದಾಗಿ ಹಲವು ಜನರು ತಮ್ಮ ಕೆಟ್ಟ ಚಟಗಳನ್ನು ತ್ಯಜಿಸಿ ಉತ್ತಮ ವ್ಯಕ್ತಿಗಳಾಗಿ ರೂಪುತಳೆಯಲು ಸಾದ್ಯವಿದೆ. ಇಂತಹ ಸಂಘಗಳಲ್ಲಿ ವ್ಯವಹಾರ ಜ್ಞಾನ ಬೆಳೆಸಿಕೊಲ್ಲಲು ಕನಿಷ್ಟ ಮಟ್ಟದ ಶಿಕ್ಷಣದ ಆವಶ್ಯಕತೆಯೂ ಇರುವ ಕಾರಣದಿಂದಾಗಿ ಜನರು ಶಿಕ್ಷಣದ ಕಡೆಗೂ ಹೆಚ್ಚಿನ ಜಾಗ್ರುತಿ ಹೊಂದಲು ಅವಕಾಶವನ್ನೊದಗಿಸುತ್ತದೆ.

►ಧಾರ್ಮಿಕ ಸಂಘ ಸಂಸ್ಥೆಗಳಲ್ಲಿ ಶೇಕಡಾ 31.15 ಪುರುಷರೂ 7.46 ಸ್ತ್ರೀಯರೂ ಸದಸ್ಯತ್ವವನ್ನು ಪಡೆದುಕೊಂಡಿದ್ದು, ಕೆಲವೊಂದು ದೇವಸ್ಥಾನ, ದೈವಸ್ಥಾನ, ಭಜನಾ ಮಂಡಳಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ ಸಮಾಜದಲ್ಲಿ ವಿವಿಧ ಭಜನಾ ತರಭೇತಿ ಕಮ್ಮಟಗಳನ್ನು ನಡೆಸುವ ಮೂಲಕ ಯುವ ಸಮುದಾಯವು ಧಾರ್ಮಿಕ ವಿಚಾರಗಳಿಂದ ವಿಮುಖ ಗೊಳ್ಳದಂತೆ ಕೆಲವು ಪ್ರಯತ್ನಗಳು ನಡೆಯುತ್ತಿವೆ. ಪರಿಶಿಷ್ಟ ಪಂಗಡ ದ ಅಭಿವೃದ್ದಿಗಾಗಿ ಸ್ಥಾಪಿತವಾಗಿರುವ ಲ್ಯಾಂಪ್ ಗಳಲ್ಲಿ ಕೇವಲ 18.09 ಪುರುಷ ಮಾಹಿತಿದಾರರೂ ಶೇಕಡಾ 11.94 ಮಹಿಳಾ ಮಾಹಿತಿದಾರರೂ ಸದಸ್ಯರಾಗಿದ್ದು, ಸರಕಾರೀ ಯೋಜನೆಗಳು

ಸೂಕ್ತ ಫಲಾನುಭವಿಗಳಿಗೆ ದೊರೆಯುವಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದರ ಸ್ಪಷ್ಟ ನಿದರ್ಶನವಾಗಿದೆ. ಕೆಲವೊಂದು ಲ್ಯಾಂಪ್ ಸೊಸೈಟಿಗಳಲ್ಲಿ ಅವ್ಯವಹಾರಗಳು ನಡೆಯುತ್ತಿದ್ದು, ಕೇವಲ ಉಳ್ಳವರ ಅಭಿವೃದ್ಧಿ ಸಾದಿತವಾಗುತ್ತಿದೆ. ಪರಿಶಿಷ್ಟ ಪಂಗಡದ ಕೆಲವೊಂದು ಜನರು ಸಿಬ್ಬಂದಿಗಳಾಗಿ ಕಾಯ ನಿರ್ವಹಿಸುವ ಅರ್ಹತೆಯನ್ನು ಹೊಂದಿದ್ದಾಗ್ಯೂ ಕೂಡಾ ಇತರ ಜಾತಿಗಳ ಜನರನ್ನು ಇಲ್ಲಿ ನೇಮಕ ಮಾಡುವ ಮೂಲಕ ಪರಿಶಿಷ್ಟ ಪಂಗಡದ ಅಬಿವೃದ್ದಿಯಲ್ಲಿ ತೊಂದರೆಯುಂಟಾಗಿದೆ.

ಸಾಂಸ್ಕೃತಿಕ ಬದಲಾವಣೆ

►ಅವಿಭಕ್ತ ಕುಟುಂಬವಾಗಿದ್ದ ಮರಾಟಿ ನಾಯ್ಕ್ ಸಮುದಾಯವು ಪ್ರಸ್ತುತ ಸಮಾಜದಲ್ಲಿ ವಿಭಕ್ತ ಕುಟುಂಬವಾಗಿ ರೂಪುತಳೆದಿದ್ದು. ಕೇವಲ ಶೇಕಡಾ 9.5 ಮಾತ್ರಾ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದಾರೆ. ಆದರೂ ಕೆಲವು ಕುಟುಂಬಗಳು ತಮ್ಮ ಕಾರ್ಯಾತ್ಮಕ ಅವಿಭಕ್ತತೆಯನ್ನು ಉಳಿಸಿಕೊಂಡು ಮುಂದುವರಿಯುತ್ತಿವೆ. ಅಲ್ಲದೆ ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಕುಟುಂಬದ ವ್ಯಕ್ತಿಗಳೆಲ್ಲರೂ ಒಟ್ಟು ಸೇರುವ ಮೂಲಕ ಅವಿಭಕ್ತತೆಯ ಲಕ್ಷಣವನ್ನು ಉಳಿಸಿಕೊಂಡು ಬರುತ್ತಿದ್ದಾರೆ.

►ಮರಾಟಿ ನಾಯ್ಕ್ ಸಮುದಾಯದಲ್ಲಿ ಗುರಿಕಾರ ಎಂಬ ಸಮುದಾಯದ ನಾಯಕ ಸ್ಥಾನವಿದ್ದು, ಶೇಕಡಾ 38 ರಷ್ಟು ಗುರಿಕಾರನಿಗೆ ಹೆಚ್ಚಿನ ಎಲ್ಲಾ ಸಂದರ್ಭಗಳಲ್ಲೂ ಪ್ರಾಮುಖ್ಯತೆಯಿದೆ. ಆದರೆ ಶೇಕಡಾ 48 ಮಂದಿ ಮಾತ್ರಾ ಗುರಿಕಾರನ ಪ್ರಾಮುಖ್ಯ ಇಂದಿನ ದಿನಗಳಲ್ಲಿ ಕ್ಷೀಣಿಸಿದೆ, ಮನೆಯ ಒಡೆಯನೇ ಎಲ್ಲಾ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿದಾನೆ, ಪ್ರಸ್ತುತ ಸಮಾಜದಲ್ಲಿ ಕಾರ್ಯಕ್ರಮಗಳನ್ನು ನಡೆಸುವ ಸಂದರ್ಭದಲ್ಲಂತೂ ಜಾತಿಯ ಆ ಊರಿಗೆ ಸಂಬಂದಪಟ್ಟಂತ ಗುರಿಕಾರ ಸಮಾರಂಬವನ್ನು ಉತ್ತಮ ರೀತಿಯಲ್ಲಿವ್ಯವಸ್ಥೆಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಇಲ್ಲಿ ಗುರುತಿಸಲಾಗಿದೆ.

►ಹುಟ್ಟಿನ ವಿಚಾರಕ್ಕೆ ಸಂಬಂದಿಸಿದಂತೆ ಆಚರಣೆ ಮತ್ತು ನಿರ್ಬಂದಗಳಿದ್ದು, ಸಾಂಪ್ರಾದಾಯಿಕ ಕಟ್ಟುನಿಟ್ಟು ಕಡಿಮೆಯಾಗಿದ್ದು, ಸಮುದಾಯವು ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿದೆ. ಹುಡುಗಿಯರು ಪ್ರೌಡಾವಸ್ಥೆಗೆ ಬರುವ ಸಂದರ್ಭದಲ್ಲಿದ್ದ ಹಲವು ಸಂಪ್ರದಾಯವಿದ್ದು 59.20 ಶೇಕಡಾ ಇನ್ನೂ " ಮದಿಮಾಲ್ ಮದಿಮೆ" ಎಂಬ ಆಚರಣೆ ಅಸ್ತಿತ್ವದಲ್ಲಿದೆ. ಮಹಿಳೆಯಯರ ಋತುಚಕ್ರದ ಸಮಯದಲ್ಲಿ ಕೆಲವು ಆಚರಣಾ ವಿಧಾನಗಳಿದ್ದು, ಕುಟುಂಬದಲ್ಲಿ ದೇವರ ಪೂಜೆ ಮಾಡುವಂತಹವರು ಇದ್ದರೆ ಅವರು ಈ ಸ್ತ್ರೀಯರ ಕೈಯಿಂದ ಈ ಸಮಯದಲ್ಲಿ ಅನ್ನ ಆಹಾರವನ್ನು ಸೇವಿಸಬಾರದೆಂಬ ನಿಯಮವಿದೆ. ವ್ಯಕ್ತಿಯ ಸಾವಿನ ಸಂದರ್ಭದಲ್ಲೂ ಶೇಕಡಾ 96ರ ಪ್ರಮಾಣದಲ್ಲಿ ಕಠಿಣ ನಿಯಮ ಪಾಲನೆಯಿದೆ.

►ವೈವಾಹಿಕ ಸಂಬಂಧಗಳನ್ನು ಏರ್ಪಡಿಸುವ ಸಂದರ್ಭದಲ್ಲಿ ಶೇಕಡಾ 94.25 ರಷ್ಟು ಕೌಟುಂಬಿಕ ಚಾರಿತ್ರ್ಯಕ್ಕೆ, ಶೇಕಡಾ 92 ಶಿಕ್ಷಣಕ್ಕೆ, ಶೇಕಡಾ 77.50 ಉದ್ಯೋಗ ವಿಚಾರಕ್ಕೆ, ಶೇಕಡಾ 89.25 ರ ಪ್ರಮಾಣದಲ್ಲಿ ಬಳಿ ಯ ವಿಚಾರಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ.

►ಶೇಕಡಾ 11 ಕುಟುಂಬಗಳಲ್ಲಿ ಹೊಸ ಅಕ್ಕಿ ಊಟ ಅಥವಾ ಪುದ್ದಾರ್ ಆಚರಣಾ ಕ್ರಮ ಇಲ್ಲದೇ ಇದ್ದು, ಶೇಕಡಾ 89 ಕುಟುಂಬಗಳಲ್ಲಿ ಈ ಸಂಪ್ರದಾಯದ ಆಚರಣೆಯಿದೆ. ಶೇಕಡಾ 93 ಕುಟುಂಬಗಳಲ್ಲಿ ಮುಡಿಪು ಕಟ್ಟುವ ಆಚರಣೆಯಿದ್ದು, ಶೇಕಡಾ 78 ಕುಟುಂಬಗಳು ವಿಷು ಯುಗಾದಿಯನ್ನು ಆಚರಿಸುತ್ತವೆ, ಶೇಕಡಾ 64 ಕುಟುಂಬಗಳಲ್ಲಿ ಅಮಾವಾಸ್ಯೆ ಊಟ ಪಿತೃಗಳ ಹೆಸರಿನಲ್ಲಿ ಮಾಡುವ ಕ್ರಮವಿದ್ದು, ಶೇಕಡಾ 36 ಕುಟುಂಬಗಳಲ್ಲಿ ಈ ಆಚರಣಾ ಕ್ರಮ ಕ್ರಮೇಣವಾಗಿ ನಶಿಸಿ ಹೋಗುತ್ತಿದ್ದು, ವಾರ್ಷಿಕವಾಗಿ ಬರುವ ಮಹಾಲಯ ಅಮಾವಾಸ್ಯೆಯ ದಿನ ಸಮುದ್ರ ಸ್ನಾನ ಮಾಡುವ ಮೂಲಕ ವೈದಿಕ ಆಚರಣೆಯ ಕಡೆಗೆ ಬದಲಾವಣೆ ಸಂಭವಿಸುತ್ತಿದೆ.

ವಿವಾಹ ವಿಚಾರಗಳಲ್ಲಿನ ಬದಲಾವಣೆ:

►ಸಂಗಾತಿ ಆಯ್ಕೆಯಲ್ಲಿ ಸ್ತ್ರೀಯರ ಸ್ವಾತಂತ್ರ್ಯದ ವಿಚಾರದಲ್ಲಿ ಪ್ರಮುಖ ಬದಲಾವಣೆಯು ಸಂಭವಿಸಿದ್ದು, ಪ್ರಸ್ತುತ ಅಧ್ಯಯನದಲ್ಲಿ ಶೇಕಡಾ 74 ಕುಟುಂಬಗಳಲ್ಲಿ ಸ್ತ್ರೀಯರ ಆಯ್ಕೆಗೆ ಮನ್ನಣೆ ನೀಡಲಾಗುತ್ತಿದೆ.

►ವಿಧವಾ ವಿವಾಹಕ್ಕೆ ಶೇಕಡಾ 90 ಕುಟುಂಬಗಳಲ್ಲಿ ಅವಕಾಶ ನೀಡಲಾಗಿದ್ದು, ಶೇಕಡಾ 10 ಕುಟುಂಬಗಳಲ್ಲಿ ಇನ್ನೂ ಸಾಂಪ್ರದಾಯಿಕತೆ ಬದಲಾವಣೆಯಾಗಿಲ್ಲ. ಪ್ರಸ್ತುತ ತಲೆಮಾರಿನಲ್ಲಿ ಈ ರೀತಿಯಲ್ಲಿ ವಿಧವಾ ವಿವಾಹಕ್ಕೆ ಹೆಚ್ಚಿನ ಅವಕಾಶಗಳಿದ್ದು, ಶೇಕಡಾ 88 ಪ್ರಥಮ ತಲೆಮಾರಿನ ಜನರು ಧನಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ದ್ವಿತೀಯ ಮತ್ತು ತೃತೀಯ ತಲೆಮಾರಿನಲ್ಲಿ ಕ್ರಮವಾಗಿ ಶೇಕಡಾ 0.8 ಮತ್ತು 0.5 ವಿಧವಾ ವಿವಾಹಗಳಿಗೆ ಅವಕಾಶವಿತ್ತು.

► ಅಂತರ್ಜಾತಿ ವಿವಾಹಗಳ ಕುರಿತು ಗಂಡು ಮತ್ತು ಹೆಣ್ಣು ಈ ಎರಡು ಲಿಂಗಗಳ ಮಧ್ಯೆ ಲಿಂಗತಾರತಮ್ಯವಿದ್ದು, ಶೇಕಡಾ 69 ಕುಟುಂಬಗಳಲ್ಲಿಗಂಡು ಮಕ್ಕಳ ಅಂತರ್ಜಾತೀಯ ವಿವಾಹಕ್ಕೆ ಒಪ್ಪಿಗೆ ಇದೆ. ಆರ್ಥಿಕ ಅಡಚಣೆಗಳು, ಹೆಚ್ಚಿದ ಸ್ತ್ರೀಯರ ಸಂಖ್ಯಾ ಪ್ರಮಾಣ, ಆಧುನಿಕ ಶಿಕ್ಷಣ ಪದ್ದತಿ ಮೊದಲಾದುವು ಅಂತರ್ಜಾತೀಯ ವಿವಾಹಕ್ಕೆ ಪೂರಕ ಅಂಶಗಳಾಗಿ ಕಾರ್ಯನಿರ್ವಹಿಸಿವೆ. ಈ ಅಂತರ್ಜಾತೀಯ ವಿವಾಹವು ಶೇಕಡಾ 87.90 ಶೇಕಡಾ ಪ್ರಮಾಣದಷ್ಟು ಪ್ರಸ್ತುತ ತಲೆಮಾರಿನಲ್ಲಿ ನಡೆದಿದ್ದು, ಹಿಂದಿನ ತಲೆಮಾರುಗಳಲ್ಲಿ ಕೇವಲ ದ್ವಿತೀಯ ತಲೆಮಾರಿನಲ್ಲಿ ಶೇಕಡಾ 6.80 ಶೇಕಡಾ ಮತ್ತು ತೃತೀಯ ತಲೆಮಾರಿನಲ್ಲಿ 5.50 ಶೇಕಡಾ ಅಂತರ್ಜಾತೀಯ ವಿವಾಹಗಳು ನಡೆದಿವೆ.

►ಶೇಕಡಾ 92.8 ಕುಟುಂಬಗಳಲ್ಲಿ ವಿಧವಾ ವಿವಾಹಕ್ಕೆ ಬೆಂಬಲವಿದ್ದು, ಶೇಕಡಾ 7.8 ಕುಟುಂಬಗಳು ವಿರೋದಿಸುವುದಾಗಿಯೂ, ಕೌಟುಂಬಿಕ ವಿಘಟನೆಗೆ ಕಾರಣವಾಗಬಹುದಾದ ವಿವಾಹ ವಿಚ್ಛೇದನದಂತಹ ವಿಚಾರಗಳಿಗೆ 97.8 ಶೇಕಡಾ ಕುಟುಂಬಗಳು ವಿರೋದವನ್ನು ವ್ಯಕ್ತಪಡಿಸುವುದಾಗಿಯೂ, ಸ್ತ್ರೀಯರ ಆರ್ಥಿಕ ಸ್ವಾವಲಂಬನೆಯ ವಿಚಾರಕ್ಕೆ ಶೇಕಡಾ 96.5 ಕುಟುಂಬಗಳಲ್ಲಿ ಬೆಂಬಲ ವ್ಯಕ್ತವಾಗಿದೆ. ಔದ್ಯೋಗಿಕ ಮುಂಭಡ್ತಿಯ ಮೀಸಲಾತಿಗೆ 95.2 ಶೇಕಡಾ ಕುಟುಂಬಗಳು ಬೆಂಬಲ ವ್ಯಕ್ತಪಡಿಸಿದ್ದು, ಅಂತರ್ಜಾತೀಯ ವಿವಾಹಗಳಿಗೆ ಶೇಕಡಾ 56.2 ಕುಟುಂಬಗಳಲ್ಲಿ ವಿರೋದ ವ್ಯಕ್ತವಾಗಿದೆ. ಸ್ತ್ರೀಯರ ಉನ್ನತ ಶಿಕ್ಷಣಕ್ಕೆ ಶೇಕಡಾ 99 ರಷ್ಟು ಬೆಂಬಲ ವ್ಯಕ್ತವಾಗಿದೆ.

ಆರೋಗ್ಯ ಸ್ಥಾನಮಾನ:

► ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಂತೆ ಹೆಣ್ಣು ಗಂಡುಗಳೆರಡನ್ನೂ ಕಾಡುವಂತ ಏಕೈಕ ಸಮಸ್ಯೆ ಎಂದರೆ ರಕ್ತದ ಒತ್ತಡ ಮತ್ತು ಸಕ್ಕರೆ ಕಾಯಿಲೆಯಂತಹ ಆಧುನಿಕ ಆರೋಗ್ಯ ಸಂಬಂಧಿ ಸಮಸ್ಯೆಗಳು. ಒಟ್ಟು 400 ಜನ ಪುರುಷರಲ್ಲಿ ಸರಿಸುಮಾರು 16.08 (32) ಶೇಕಡ ಪುರುಷ ಮಾಹಿತಿದಾರರು ಅತಿಯಾದ ರಕ್ತದ ಒತ್ತಡದಿಂದ ಬಳಲುತ್ತಿರುವುದು ತಿಳಿದು ಬಂದಿದೆ, ಅದೇ ರೀತಿ 14.57 (29) ಶೇಕಡ ಮಾಹಿತಿದಾರರು ಅತಿಯಾದ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವುದು ಕಂಡು ಬಂದಿದೆ. ಅದೇ ರೀತಿ 12.56 (25) ಶೇಕಡ ಪುರುಷ ಮಾಹಿತಿದಾರರು ವಿಪರೀತಾ ಮೈ ಕೈ ನೋವಿನಿಂದ ಬಳಲುತ್ತಿದ್ದರೆ, 12.56 (25) ಪುರುಷ ಮಾಹಿತಿದಾರರು ಬೆನ್ನು ನೋವು ಮತ್ತು ಮಂಡಿ ನೋವಿನಂತ ಕಾಯಿಲೆಯಿಂದ ಬಳಲುತ್ತಿರುವುದು ಕಂಡು ಬಂದಿದೆ. ಇಲಿ ಜ್ವರ ಸುಳ್ಯ ಮತ್ತು ಪುತ್ತೂರುಗಳಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ, ಯಾಕೆಂದರೆ ಅಲ್ಲಿ ವಾಸಿಸುವ ಜನರು ಹೆಚ್ಚಾಗಿ ಗುಡ್ಡ ಕಾಡು ಪ್ರದೇಶಗಳಲ್ಲಿ ವಾಸಮಾಡುವುದರಿಂದ ಅವರನ್ನು ಆಗಾಗ ಕಾಡುವಂತಹ ಕಾಯಿಲೆ ಎಂದರೆ ಇಲಿ ಜ್ವರ ಅಥವಾ ಮಂಗನ ಕಾಯಿಲೆ(6.03%). ಇದರ ಜೊತೆಗೆ ವಾಂತಿ ಬೇದಿ (4.2 %), ಅಸ್ತಮ 10.5% ಅಲರ್ಜಿ (3.5%) ಮುಂತಾದ ಕಾಯಿಲೆಗಳಿಂದ ಬಳಲುತ್ತಿರುವುದು ಕಂಡು ಬಂದಿದೆ.

►ಶೇಕಡಾ 69 ಮಹಿಳೆಯರಿಗೆ ಮಕ್ಕಳ ಬೆಳವಣಿಗೆಯ ಸಮಯದಲ್ಲಿ ಸರಿಯಾಗಿ ದೊರೆಯದ ಪೌಷ್ಟಿಕ ಆಹಾರವು ಹಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸಲು ಕಾರಣವಾಗಿದೆ. ಶೇಕಡಾ 46 ಮಹಿಳೆಯರಲ್ಲಿ ವಯೋ ಸಹಜವಾದ ಆರೋಗ್ಯ ಸಮಸ್ಯೆಗಳು ಕಂಡು ಬಂದಿದ್ದು, ಶೇಕಡಾ 32 ಮಹಿಳೆಯರು ಅಸ್ತಮಾದಂತಹ ಸಮಸ್ಯೆಗೆ ಪರಿಸರದಲ್ಲಿ ಉಂಟಾಗುವ ಅನೈರ್ಮಲ್ಯಯುಕ್ತತೆ, ಕಾರ್ಖಾನೆಗಳ ಸ್ಥಾಪನೆ ವಾತಾವರಣದ ಕಲುಷಿತತೆ ಕಾರಣವಾಗಿದ್ದು, ಶೇಕಡಾ 27 ಮಹಿಳೆಯರ ಆರೋಗ್ಯ ಸಮಸ್ಯೆಗಳಿಗೆ ವಂಶವಾಹಿನಿ, ಕೆಲವು ಮೂಡ ಆಚರಣೆಗಳು ಕಾರಣವಾಗಿದೆ.

▶ಶೇಕಡಾ 9.50 ಕುಟುಂಬಗಳಲ್ಲಿ ಕುಟುಂಬ ಸದಸ್ಯರ ಶೈಕ್ಷಣಿಕ ಅಭಿವೃದ್ದಿಗೆ ಆರೋಗ್ಯ ಸಮಸ್ಯೆ ಕಾರಣವಾಗಿದ್ದು, ಸ್ವತಹ ವಿದ್ಯಾರ್ಥಿಗಳೇ ಅನಾರೋಗ್ಯಕ್ಕೆ ತುತ್ತಾದ ಕಾರಣದಿಂದಾಗಿ ಅವರ ಶೈಕ್ಷಣಿಕ ಭವಿಷ್ಯವು ಅಲ್ಲಿಗೇ ಕುಂಠಿತಗೊಂಡಿವೆ. ಇನ್ನೂ ಕೆಲವು ಕುಟುಂಬಗಳಲ್ಲಿ ಕುಟುಂಬದ ಯಜಮಾನ ಅಸ್ವಸ್ಥನಾದಾಗ ಕುಟುಂಬದ ಜವಾಬ್ದಾರಿ ಅನಿವಾರ್ಯವಾಗಿ ಇತರ ಸದಸ್ಯರ ಮೇಲೆ ಬೀಳುವ ಕಾರಣದಿಂದಾಗಿ ಹಲವು ವಿದ್ಯಾರ್ಥಿಗಳ ಭವಿಷ್ಯವೇ ಹಾಳಾಗಿದೆ. ಶೇಕಡಾ 0.80 ದಂಪತಿಗಳ ನಡುವಿನ ಸಂಬಂಧಗಳು ಹಾಳಾಗಲೂ ಕೂಡಾ ಈ ಆರೋಗ್ಯ ಸಮಸ್ಯೆಯು ಕಾರಣವಾಗಿದೆ. ಶೇಕಡಾ 42.50 ಕುಟುಂಬಗಳಲ್ಲಿ ಆರೋಗ್ಯ ಸಮಸ್ಯೆಯಿಂದಾಗಿ ಕೌಟುಂಬಿಕ ಜೀವನದಲ್ಲಿ ಏರಿಳಿತಗಳು ಉಂಟಾದರೂ ಕೂಡಾ ಪ್ರಮುಖ ಸಮಸ್ಯೆಗಳೇನು ಆಗಿಲ್ಲ.

▶ಶೇಕಡಾ 97.5 ಕುಟುಂಬಗಳು ಅನಾರೋಗ್ಯ ಸಮಸ್ಯೆಗಳಿಗೆ ಖಾಸಗೀ ಆಸ್ಪತ್ರೆಗಳನ್ನು ಹೆಚ್ಚು ಅವಲಂಬಿಸುತ್ತಿದ್ದಾರೆ. ಶೇಕಡಾ 31.25 ಜನರು ಮಾತ್ರಾ ತಾವು ಅನಾರೋಗ್ಯಕ್ಕೆ ಗುರಿಯಾದಾಗ ಸರ್ಕಾರೀ ಪ್ರಾಯೋಜಿತ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದಾರೆ. ಸರಕಾರೀ ಆಸ್ಪತ್ರೆಗಳಲ್ಲಿ ವೈಧ್ಯಾಧಿಕಾರಿಗಳ ಅಲಭ್ಯತೆ, ಎಲ್ಲಾ ಚಿಕಿತ್ಸೆಗಳ ಅಲಭ್ಯತೆ,ಸರಕಾರೀ ಆಸ್ಪತ್ರೆಗಳಲ್ಲಿ ದೊರೆಯುವ ಚಿಕಿತ್ಸೆಗಳ ಬಗ್ಗೆ ಮಾಹಿತಿಯ ಕೊರತೆ ಮರಾಟಿ ನಾಯ್ಕ್ ಸಮುದಾಯದ ಜನರು ಅಧಿಕ ಮೊತ್ತವನ್ನು ವ್ಯಯಿಸಿ ಖಾಸಗೀ ಆಸ್ಪತ್ರೆಗಳಿಂದ ಚಿಕಿತ್ಸೆಯನ್ನು ಪಡೆಯಲು ಕಾರಣವಾಗಿದೆ. ಶೇಕಡಾ 12 ಜನರು ಸಾಂಪ್ರಾದಾಯಿಕ ಹಳ್ಳಿಮದ್ದಿನ ಮತ್ತು ಆಯುರ್ವೇದಿಕ್ ಮೊರೆ ಹೋಗುತ್ತಾರೆ. ಈ ವೈದ್ಯಕೀಯ ಪದ್ದತಿಯು ಆಧುನಿಕ ವೈದ್ಯಕೀಯ ಪದ್ದತಿಯ ಅನುಷ್ಟಾನದಿಂದಾಗಿ ಮೂಲೆಗುಂಪಾಗಿದ್ದು, ಆಧುನಿಕ ವೈಧ್ಯಕೀಯ ಪದ್ದತಿಯಲ್ಲಿ ಗುಣಪಡಿಸಲು ಸಾದ್ಯವಾಗದ ಹಲವು ಸಮಸ್ಯೆಗಳನ್ನು ಈ ಸಾಂಪ್ರಾದಾಯಿಕ ಮೂಲಿಕೆಗಳ ಮೂಲಕ ಗುಣಪಡಿಸಿದ ಹಲವು ನಿದರ್ಶನಗಳಿವೆ.

▶ಶೇಕಡಾ 51 ಜನ ತಮ್ಮ ವಾಸಸ್ಥಳದಿಂದ ಸಾರ್ವಜನಿಕ ಆಸ್ಪತ್ರೆಗೆ ಆರರಿಂದ ಹತ್ತು ಕಿ.ಮೀ ರ ದೂರವನ್ನು ಕ್ರಮಿಸಬೇಕಾಗಿದ್ದು, ,ಶೇಕಡಾ 43.50 ಜನರು ಸಾರ್ವಜನಿಕ ಆಸ್ಪತ್ರೆಗಳಿಗೆ ತೆರಳಬೇಕಾದರೆ ಹನ್ನೊಂದರಿಂದ ಹದಿನೈದು ಕಿ.ಮೀ ಗಳಷ್ಟು ದೂರ ಕ್ರಮಿಸಬೇಕಾಗಿದ್ದು, ಆರೋಗ್ಯ ವಿಪರೀತವಾಗಿ ಹದಗೆಟ್ಟಾಗ ವ್ಯಕ್ತಿಗೆ ಮಾರಾಣಾಂತಿಕವಾಗಲೂ ಕಾರಣವಾಗಿದೆ, ಶೇಕಡಾ 0.80 ಜನರು ಇನ್ನೂ ಹೆಚ್ಚಿನ ದೂರ ಅಂದರೆ ಸುಮಾರು 16 ಕಿ.ಮೀ ಗಳಷ್ಟು ದೂರವನ್ನು ಆರೋಗ್ಯ ಸೌಲಭ್ಯ ಪಡೆಯಲು ತೆರಳಬೇಕಾಗಿರುವಂತಹುದು ಬಹಳ ಕೆಟ್ಟ ಪರಿಸ್ಥಿತಿಯಾಗಿದೆ.

▶ಶೇಕಡಾ 57.75 ಕುಟುಂಬಗಳು ಬಿ.ಪಿ.ಎಲ್ ಪಡಿತರ ಚೀಟಿಯನ್ನು ಹೊಂದಿದ್ದು, ಈ ಪಡಿತರ ಚೀಟಿಯನ್ನು ಹೊಂದಿರುವವರಿಗೆ ಕೆಲವು ಆಯ್ದ ಖಾಸಗೀ ಆಸ್ಪತ್ರೆಗಳಲ್ಲಿ ಚಿಕಿತ್ಸೆಯು ಸಂಪೂರ್ಣವಾಗಿ ಸರಕಾರದ ವತಿಯಿಂದ ಉಚಿತವಾಗಿದ್ದು, ಈ ಮಾಹಿತಿಯು ಗ್ರಾಮೀಣ ಭಾಗದ ಜನರಿಗೆ ತಿಳಿದಿಲ್ಲ. ಆದ್ದರಿಂದ ಅನಾರೋಗ್ಯಗಳಿಗೆ

ತುತ್ತಾದ ಸಂದರ್ಭಗಳಲ್ಲಿ ಖಾಸಗೀ ಕ್ಲಿನಿಕ್ ಗಳಿಗೆ ತೆರಳಿ ಅಧಿಕ ಮೊತ್ತವನ್ನು ಭರಿಸಿ ಚಿಕಿತ್ಸೆಯನ್ನು ಪಡೆಯುತ್ತಾರೆ.ಶೇಕಡಾ 41 ಕುಟುಂಬಗಳಲ್ಲಿ ಎ.ಪಿ.ಎಲ್ ಕಾರ್ಡುಗಳಿದ್ದು,ಈ ಕಾರ್ಡನ್ನು ಹೊಂದಿರುವ ಜನರಿಗೆ ಕೆಲವೊಂದು ಆರೋಗ್ಯ ವಿಮೆಗಳು ದೊರಕುತ್ತಿದ್ದು,ಶೇಕಡಾ 30 ನ್ನು ರೋಗಿಯ ಕಡೆಯವರು ಭರಿಸಬೇಕಾಗುವುದು, ಉಳಿದ ಶೇಕಡಾ 70 ಭಾಗದಷ್ಟು ಖರ್ಚನ್ನು ಸರಕಾರವು ಆಸ್ಪತ್ರೆಗಳಿಗೆ ಭರಿಸುತ್ತವೆ. ಶೇಕಡಾ 28.50 ಕುಟುಂಬಗಳಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಕಾರ್ಡುಗಳಿದ್ದು, ಈ ಕಾರ್ಡು ಹೊಂದಿರುವ ಮನೆಯ ಸದಸ್ಯರು ಯಾರಾದರೂ ಒಬ್ಬರು ಆಸ್ಪತ್ರೆಗೆ ಒಳರೋಗಿಯಾಗಿ ಧಾಖಲಾದಲ್ಲಿ ವಾರ್ಷಿಕ 30,000 ಮೊತ್ತದ ಚಿಕಿತ್ಸೆಯು ಉಚಿತವಾಗಿ ದೊರೆಯುತ್ತದೆ. ಶೇಕಡಾ 45.25 ಕುಟುಂಬಗಳಲ್ಲಿ ಯಶಸ್ವಿನಿ ಯೋಜನೆಯ ಕಾರ್ಡುಗಳಿದ್ದು, ಈ ಯೋಜನೆಯಲ್ಲಿ ಬಿ.ಪಿ.ಎಲ್ ಕಾರ್ಡುದಾರರಿಗೆ ಸಂಪೂರ್ಣ ಉಚಿತ ಚಿಕಿತ್ಸೆ ಮತ್ತು ಎ.ಪಿ.ಎಲ್. ಕಾರ್ಡುದಾರರಿಗೆ ಶೇಕಡಾ 70 ಉಚಿತ ಚಿಕಿತ್ಸೆಯು ದೊರೆಯುತ್ತಿತ್ತು. ಶೇಕಡಾ 18.50 ಕುಟುಂಬಗಳಲ್ಲಿ ಇ.ಎಸ್,ಐ. ಸೌಲಭ್ಯವಿದ್ದು, ಕೆಲಸಕ್ಕೆ ಸೇರಿದ ಅವಧಿಯ ಆದಾರದಲ್ಲಿ ಇವರಿಗೆ ವಿವಿಧ ಇ.ಎಸ್.ಐ ಆಸ್ಪತ್ರೆಗಳಲ್ಲಿ ಅಥವಾ ಇ.ಎಸ್.ಐ ಗೆ ಸಂಯೋಜಿತಗೊಂಡ ಖಾಸಗೀ ಆಸ್ಪತ್ರೆಗಳಲ್ಲಿ ವಿವಿಧ ಸ್ತರದ ಚಿಕಿತ್ಸೆಗಳು ಉಚಿತವಾಗಿ ಲಭ್ಯವಿದೆ. ಶೇಕಡಾ 30.20 ಕುಟುಂಬಗಳಲ್ಲಿ ದರ್ಮಸ್ಥಳ ಗ್ರಾಮಿಣ ಅಭಿವೃದ್ದಿಯ ಸ್ವ–ಸಹಾಯ ಸಂಘಗಳ ಸದಸ್ಯರಿಗೆ ಒದಗಿಸಿಕೊಡುವ ಸಂಪೂರ್ಣ ಸುರಕ್ಷಾ ಕಾರ್ಡುಗಳಿದ್ದು, ಈ ಯೋಜನೆಯಲ್ಲೂ ಸ್ವಲ್ಪ ಪ್ರಮಾಣದಲ್ಲಿ ಆರೋಗ್ಯ ಸಹಾಯವನ್ನು ನೀಡಲಾಗುತ್ತದೆ. ಆದರೆ ಹೆಚ್ಚಿನ ಜನರು ಈ ಯೋಜನೆಗಳ ಲಾಭವನ್ನು ಪಡೆಯುತ್ತಿಲ್ಲ.

►ಶೇಕಡಾ 71.25 ಕುಟುಂಬಗಳಲ್ಲಿ ಗರ್ಬಿಣಿಯರು ಪೌಷ್ಟಿಕಾಂಶಯುಕ್ತ ಆಹಾರವನ್ನು ಪಡೆದಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ಇದಕ್ಕಾಗಿ ಪ್ರತ್ಯೇಕ ದಾಖಲಾತಿಯನ್ನು ಮಾಡುವ ಕಾರಣವಾಗಿ ಮತ್ತು ಗರ್ಭಿಣಿಯರಿಗೆ ಸರಕಾರದ ವತಿಯಿಂದ ಉತ್ತಮ ಹೆರಿಗೆಯಾಗಲು ಹಲವು ಸೌಲಭ್ಯಗಳನ್ನು ಒದಗಿಸುವ ಕಾರಣವಾಗಿ ಮತ್ತು ಗರ್ಭಾವಸ್ಥೆಗೆ ಸಂಬಂಧಪಟ್ಟಂತೆ ಹಲವು ಕಾನೂನುಗಳು ಜಾರಿಗೆ ಬಂದಿರುವ ಕಾರಣವಾಗಿ ಬ್ರೂಣಹತ್ಯೆ, ಬ್ರೂಣ ಲಿಂಗ ಪತ್ತೆ ಹಚ್ಚುವಿಕೆ, ಗರ್ಭಾಪಾತ, ಮೊದಲಾದ ಘಟನೆಗಳು ನಿಯಂತ್ರಿಸಲ್ಪಟ್ಟಿವೆ .ಶೇಕಡಾ 49 ಕುಟುಂಬಗಳು ಮಾತ್ರಾ ಶುಚಿತ್ವದ ವಿಚಾರಕ್ಕೆ ಹೆಚ್ಚು ಕಾಳಜಿಯನ್ನು ವಹಿಸಿದ್ದು, ಶೇಕಡಾ 51 ಕುಟುಂಬಗಳಲ್ಲಿ, ಹೆಚ್ಚಿನ ಕಾಳಜಿ ಇಲ್ಲವಾಗಿದ್ದು, ಕುಟುಂಬದ ಸದಸ್ಯರು ಪಡೆದಿರುವ ಶಿಕ್ಷಣ ಮಟ್ಟ ಇಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವುದು,ಹೆಚ್ಚಿನ ಶಿಕ್ಷಣವನ್ನು ಪಡೆದ ಜನರು ಮಾತ್ರಾ ಶುಚಿತ್ವದ ಕುರಿತು ಮತ್ತು ದೈಹಿಕ ಸಮಸ್ಯೆಗಳ ಕುರಿತು ಮುಕ್ತವಾಗಿ ತಮ್ಮ ಕುಟುಂಬದ ಸದಸ್ಯರು ಮತ್ತು ವೈದ್ಯರೊಂದಿಗೆ ಚರ್ಚಿಸುವರೇ ಹೊರತು ಕಡಿಮೆ ಶಿಕ್ಷಣವನ್ನು ಪಡೆದ ಜನರಲ್ಲಿ ಈ ಕುರಿತಾಗಿ ಇರುವ ಸಾಂಪ್ರಾದಾಯಿಕ ಮನೋಭಾವನೆ ಮತ್ತು ಕೆಲವು ದೈಹಿಕ ವಿಚಾರಗಳ ಬಗ್ಗೆ ಮುಕ್ತ ವಾತಾವರಣ ಇಲ್ಲದೇ ಇರುವ ಪರಿಸ್ಥಿತಿಯು ಹಲವು ಸಮಸ್ಯೆಗಳಿಗೆ ಪರೋಕ್ಷವಾಗಿ ಕಾರಣವಾಗಿದೆ.

►ಶೇಕಡಾ 11.20 ಶಿಶು ಮರಣವು ಸಂಭವಿಸಿದ್ದು, ಶೇಕಡಾ 88.80 ಕುಟುಂಬಗಳಲ್ಲಿ ಅಪ್ರಾಪ್ತ ಶಿಶು ಮರಣ ಸಂಭವಿಸಿಲ್ಲ. ಶೇಕಡಾ 10.80 ಕುಟುಂಬಗಳಲ್ಲಿ ಗರ್ಭಪಾತ ಘಟನೆಗಳು ಸಂಭವಿಸಿದ್ದು, ಇದಕ್ಕೆ ಹೆಚ್ಚಿನ ಮಾನಸಿಕ ಒತ್ತಡ,ಅಧಿಕ ಕಠಿಣ ಕೆಲಸ ನಿರ್ವಹಣೆ, ಹೆಚ್ಚಿನ ಪ್ರಯಾಣ, ನಿಗದಿತ ವಯಸ್ಸಿಗಿಂತ ಹೆಚ್ಚಿನ ವಯೋಮಾನದ ವಿವಾಹಗಳು, ಆಧುನಿಕ ಜೀವನ ಶೈಲಿ, ಮೊದಲಾದುವು ಕಾರಣವಾಗಿವೆ. ಶೇಕಡಾ 6.50 ಕುಟುಂಬಗಳಲ್ಲಿ ಅವಧಿ ಪೂರ್ವ ಪ್ರಸವ ಸಂಭವಿಸಿದ್ದು ಇದಕ್ಕೆ ಅಪರಿಪೂರ್ಣ ಭ್ರೂಣದ ಬೆಳವಣಿಗೆ,ವಂಶವಾಹಿಕ ಕಾಯಿಲೆಗಳು, ವೈದ್ಯಕೀಯ ಉಪಚಾರಗಳ ನಕಾರಾತ್ಮಕ ಪರಿಣಾಮಗಳು,ಕಾರಣವಾಗಿವೆ. ಶೇಕಡಾ 3.20 ಕುಟುಂಬಗಳಲ್ಲಿ ವಿಶೇಷ ಮಕ್ಕಳ ಜನನವಾಗಿದ್ದು, ಅತ್ಯಂತ ಹತ್ತಿರದ ಬಂಧುಗಳಲ್ಲಿ ವಿವಾಹ, ಗರ್ಭಾವಸ್ಥೆಯಲ್ಲಿ ಸರಿಯಾದ ಆರೈಕೆ ತೆಗೆದುಕೊಳ್ಳದೇ ಇರುವುದು, ವಂಶವಾಹಿಕ ಸಮಸ್ಯೆಗಳು, ಔಷದೋಪಚಾರಗಳ ನಕಾರಾತ್ಮಕ ಪರಿಣಾಮಗಳು ವಿಶೇಷ ಚೇತನ ಮಕ್ಕಳ ಜನನಕ್ಕೆ ಕಾರಣವಾಗಿವೆ. ಶೇಕಡಾ 31.20 ಕುಟುಂಬಗಳಲ್ಲಿ ವಯಸ್ಕರ ಮರಣಗಳು ಸಂಭವಿಸಿದ್ದು, ಆರೋಗ್ಯ ಸಮಸ್ಯೆಗಳು, ಆಕಸ್ಮಿಕ ಅಪಘಾತಗಳು, ಇದಕ್ಕೆ ಪ್ರಮುಖ ಕಾರಣವಾಗಿದೆ.

► ಶೇಕಡಾ 23.75 ಜನರು ಸುಮಾರು 300 ರೂಪಾಯಿಗಳನ್ನು ತಿಂಗಳಿಗೆ ಆಸ್ಪತ್ರೆಯ ಖರ್ಚಿಗೆ ಖರ್ಚು ಮಾಡುತ್ತಿದ್ದು, ಶೇಕಡಾ 42 ರಷ್ಟು ಪ್ರಮಾಣದ ಮಾಹಿತಿದಾರರು 500 ರೂಪಾಯಿಯಷ್ಟು ಮತ್ತು ಶೇಕಡಾ 15.75 ಜನ ತಿಂಗಳಿಗೆ 700 ರೂಪಾಯಿಗಳು ಕೇವಲ ಆಸ್ಪತ್ರೆ ಖರ್ಚಿಗೆ ತೆಗೆದಿಡಬೇಕು. ಮರಾಟಿ ನಾಯ್ಕ್ ಸಮುದಾಯದ ಹೆಚ್ಚಿನ ವ್ಯಕ್ತಿಗಳು ಸಾಮಾನ್ಯವಾಗಿ ಏನಾದರೊಂದು ರೋಗರುಜಿನಗಳಿಗೆ ಬಳಿಯಾಗುತ್ತಲೇ ಇರುತ್ತಾರೆ.

►ಶೇಕಡಾ 80 ಜನರು ದುರಾಭ್ಯಾಸಗಳಿಂದ ದೂರ ಇರುವ ಮೂಲಕ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಪ್ರಯತ್ನವನ್ನು ಮಾಡುತ್ತಿದ್ದಾರೆ. ಶೇಕಡಾ 51 ಜನರು ನಿರಂತರ ಶಾರೀರಿಕ ವ್ಯಾಯಾಮವನ್ನು ಸಂಧ್ಯಾ ಸಮಯ ಅಥವಾ ಬೆಳಗಿನ ಜಾವ ದಲ್ಲಿ ನಡೆಸುವ ಮೂಲಕ ಆಧುನಿಕ ಸಮಾಜದಲ್ಲಿ ಕಂಡುಬರುವ ಹಲವು ಆರೋಗ್ಯ ಸಮಸ್ಯೆಗಳಿಂದ ಮುಕ್ತಿಯನ್ನು ಹೊಂದಲು ಪ್ರಯತ್ನವನ್ನು ಮಾಡುತ್ತಿದ್ದಾರೆ.ಶೇಕಡಾ 46.75 ರ ಪ್ರಮಾಣದಷ್ಟು ಜನರು ಕೆಲವು ಆಹಾರ ಸೇವನೆಯನ್ನು ಮಾಡುವಲ್ಲಿ ನಿಯಂತ್ರಣವನ್ನು ಮಾಡಿ ಆಧುನಿಕ ಆರೋಗ್ಯ ಸಮಸ್ಯೆಗಳಾದ ಅಧಿಕ ರಕ್ತದೊತ್ತಡ, ಡಯಾಬಿಟಿಸ್,ಮೊದಲಾದ ಸಮಸ್ಯೆಗಳಿಂದ ಮುಕ್ತಿಯನ್ನು ಪಡೆಯಲು ಪ್ರಯತ್ನವನ್ನು ಮಾಡುತ್ತಿದ್ದಾರೆ.ಶೇಕಡಾ 32.75 ರಷ್ಟು ಜನರು ನಿಗದಿತವಾಗಿ ಯೋಗಾಭ್ಯಾಸ ಮತ್ತು ಧ್ಯಾನವನ್ನು ಮಾಡುವ ಮೂಲಕ ಹಲವು ಆರೋಗ್ಯ ಸಮಸ್ಯೆಗಳಾದ ಮಾನಸಿಕ ಒತ್ತಡ,ಖಿನ್ನತೆ,ಎಲುಬು ನೋವು,ಅಸ್ತಮಾ ಮೊದಲಾದ ಸಮಸ್ಯೆಗಳಿಂದ ಮುಕ್ತಿ ಹೊಂದುತ್ತಿದ್ದಾರೆ. ಈ ರೀತಿಯಲ್ಲಿ ಆರೋಗ್ಯ ವಿಚಾರಗಳ ಜಾಗೃತಿ ನಿಧಾನವಾಗಿ ಶಿಕ್ಷಣವನ್ನು ಪಡೆದ ಆಧುನಿಕ ಉದ್ಯೋಗಗಳನ್ನು ಮಾಡುವ ಮರಾಟಿ ನಾಯ್ಕ್ ಜನರಲ್ಲಿ ಮೂಡಿದೆ.

ಸರಕಾರೀ ಯೋಜನೆ ಮತ್ತು ಮೀಸಲಾತಿ

►ಶೇಕಡಾ 82.50 ಜನರಿಗೆ ಅಂಬೇಡ್ಕರ್ ವಸತಿ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಯ ಬಗ್ಗೆ ಅರಿವಿದ್ದು,ಶೇಕಡಾ 17.50 ಜನರಿಗೆ ಇಂತಹ ಯೋಜನೆಯ ಸಹಾಯದಿಂದ ಸ್ವಂತ ಸೂರನ್ನು ಹೊಂದಬಹುದೆಂಬುದರ ಬಗ್ಗೆ ಅರಿವೇ ಇಲ್ಲ. ಶೇಕಡಾ 84.20 ಜನರಿಗೆ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಮಾಹಿತಿ ಇದ್ದು, ಶೇಕಡಾ 15.80 ಕುಟುಂಬಗಳಿಗೆ ಈ ಯೋಜನೆಯ ಬಗ್ಗೆ ಅರಿವಿಲ್ಲವಾಗಿದೆ. ಗಂಗಾ ಕಲ್ಯಾಣ ಯೋಜನೆಯ ಕುರಿತು ಶೇಕಡಾ 77 ಜನರಿಗೆ ಮಾಹಿತಿ ಇದ್ದು 23 ಶೇಕಡಾ ಜನರಿಗೆ ಇಂತಹ ಯೋಜನೆಯು ಅಸ್ಥಿತ್ವದಲ್ಲಿದೆ ಎಂಬುದರ ಬಗ್ಗೆಯೇ ಮಾಹಿತಿ ಇಲ್ಲ. ಭಾಗ್ಯಲಕ್ಷ್ಮಿ ಯೋಜನೆಯ ಕುರಿತು ಶೇಕಡಾ 88.50 ಜನರಿಗೆ ಮಾಹಿತಿ ಇದ್ದು, ಶೇಕಡಾ 11.50 ಜನರಿಗೆ ಈ ಯೋಜನೆಯ ಬಗ್ಗೆ ಮಾಹಿತಿ ಇಲ್ಲವಾಗಿದೆ.

►ಸರಕಾರಿ ಯೋಜನೆಗಳ ಪ್ರಸರಣದಲ್ಲಿ ಸಮೂಹ ಮಾಧ್ಯಮವು ಪ್ರಮುಖ ಪಾತ್ರ ನಿರ್ವಹಿಸಿದ್ದು, ಶೇಕಡಾ 67.50 ಜನರು ಹಲವು ಯೋಜನೆಗಳ ಬಗ್ಗೆ ಮಾಹಿತಿಯನ್ನು ಸಮೂಹ ಮಾಧ್ಯಮಗಳಿಂದ ಪಡೆದುಕೊಂಡಿದ್ದಾರೆ. ಶೇಕಡಾ 28.75 ಜನರು ಈ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪಂಚಾಯತ್ ವ್ಯವಸ್ಥೆಯ ವಿವಿಧ ಸ್ತರದ ಅಧಿಕಾರಿಗಳಿಂದ ಪಡೆದಿದ್ದಾರೆ. ಶೇಕಡಾ 21 ಜನರು ತಮ್ಮ ಗೆಳೆಯರ ಬಳಗ ಅಥವಾ ಹತ್ತಿರದ ಸ್ನೇಹಿತರಿಂದ ಯೋಜನೆಗಳ ಬಗ್ಗೆ ತಿಳಿದುಕೊಂಡಿದ್ದು, ಶೇಕಡಾ 8 ಜನರು ಯೋಜನೆಗಳ ಬಗ್ಗೆ ತನ್ನ ಸಂಬಂಧಿಕರಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

►ಮೀಸಲಾತಿಯ ಕಾರಣದಿಂದಾಗಿ ಮರಾಟಿ ನಾಯ್ಕ್ ಸಮುದಾಯದ ಶೇಕಡಾ 31.75 ಶೇಕಡಾ ಕುಟುಂಬಗಳಿಗೆ ಕೃಷಿ ವಿಚಾರಕ್ಕೆ ಸಹಾಯಕವಾಗಿದ್ದು, ಶೇಕಡಾ 13.25 ಕುಟುಂಬ ಸದಸ್ಯರಿಗೆ ವಿವಿದ ತರಭೇತಿಗಳಿಗೆ, ಶೇಕಡಾ 34.75 ಕುಟುಂಬ ಸದಸ್ಯರಿಗೆ ವಿವಿಧ ಉದ್ಯೋಗಗಳನ್ನು ಪಡೆಯಲು ಶೇಕಡಾ 11.25 ಕುಟುಂಬ ಸದಸ್ಯರಿಗೆ ಮುಂಭಡ್ತಿ ಹೊಂದಲು ಮೀಸಲಾತಿಯು ಸಹಾಯವನ್ನೊದಗಿಸಿದೆ.

►ಮೀಸಲಾತಿಯು ಸಾಮಾಜಿಕ ನ್ಯಾಯದ ಪರಿಕಲ್ಪನೆಯಾಗಿ ದುರ್ಬಲ ವರ್ಗಗಳ ಪ್ರತಿನಿಧಿತ್ವವನ್ನು ವಿವಿದ ಸ್ತರಗಳಲ್ಲಿ ಭರ್ತಿಗೊಳಿಸುವ ಈ ಪರಿಕಲ್ಪನೆಯ ಕುರಿತಾಗಿ ಇತರ ಜಾತಿಯ ಸದಸ್ಯರಿಂದ ಶೇಕಡಾ 69.80 ಕುಟುಂಬ ಸದಸ್ಯರು ಮತ್ಸರ ಮನೋಭಾವನೆಯನ್ನು ಗುರುತಿಸಿದ್ದಾರೆ. ಶೇಕಡಾ 30.20 ಕುಟುಂಬ ಸದಸ್ಯರಿಗೆ ಈ ಮನೋಭಾವವು ಅರಿವಿಗೆ ಬಂದಿಲ್ಲ.

ಸ್ತ್ರೀ ಸಂಬಂಧಿತ ವಿಚಾರಗಳಲ್ಲಿ ಚಲನೆ:

►ಶೇಕಡಾ 74 ಕುಟುಂಬಗಳಲ್ಲಿ ಸಂಗಾತಿ ಆಯ್ಕೆ ಪ್ರಕ್ರಿಯೆಯಲ್ಲಿ ಸ್ತ್ರೀಯರ ಅಭಿಪ್ರಾಯಗಳಿಗೆ ಮನ್ನಣೆಯನ್ನು ನೀಡಲಾಗುತ್ತಿದೆ. ಇದಕ್ಕೆ ಪ್ರಸ್ತುತ ಸಮಾಜದಲ್ಲಿ ಸ್ತ್ರೀಯರು ಶೈಕ್ಷಣಿಕವಾಗಿ ಚಲನೆಯನ್ನು ಕಾಣುತ್ತಿರುವುದು ಕಾರಣವಾಗಿದೆ. ಆದರೆ ಶೇಕಡಾ 26 ಮಾಹಿತಿದಾರರು ಸಂಗಾತಿ ಆಯ್ಕೆಯಲ್ಲಿ ಸ್ವಾತಂತ್ರ್ಯವಿಲ್ಲ ಎಂಬುದಾಗಿ ತಿಳಿಸಿದ್ದಾರೆ.

►ಶೇಕಡಾ 90 ಕುಟುಂಬಗಳಲ್ಲಿ ವಿಧವೆಯರ ಮರುವಿವಾಹಕ್ಕೆ ಸಮ್ಮತಿಯ ವಾತಾವರಣ ಕಂಡುಬಂದಿದ್ದು, ಧನಾತ್ಮಕ ಬೆಳವಣಿಗೆಯಾಗಿದೆ. ಇದರ ಜತೆಗೆ ಸಾಂಪ್ರಾದಾಯಿಕ ವ್ಯವಸ್ಥೆಯಲ್ಲಿದ್ದ ವಿಧವೆಯರಿಗೆ ವಿವಾಹದ ಪ್ರತಿಯೊಂದು ವಿಧಿಗಳನ್ನು ನಿಷೇದಿಸಿವಂತಹ ಕೈಹಿಡಿಸುವ ಶಾಸ್ತ್ರವನ್ನು ಕೂಡಾ ಪ್ರಸ್ತುತವಾಗಿ ನಗರಪ್ರದೇಶಗಳ ವಿವಾಹಗಳಲ್ಲಿ ಕೈಬಿಡಲಾಗುತ್ತಿದೆ.

►ವಿಧವಾ ವಿವಾಹಕ್ಕೆ ಹಿಂದಿನ ತಲೆಮಾರುಗಳಲ್ಲಿ ಅವಕಾಶಗಳು ಇತ್ತಾದರೂ ಕೂಡಾ ಪ್ರಸ್ತುತ ತಲೆಮಾರಿನಲ್ಲಿ ಕಂಡು ಬರುವಷ್ಟು ಮುಕ್ತ ವಾತಾವರಣ ಇರಲಿಲ್ಲ. ಶೇಕಡಾ 10.80 ಕುಟುಂಬಗಳಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿಲ್ಲದೇ ಆಗಿದ್ದು, ಪ್ರಥಮ ತಲೆಮಾರಿನ ಶೇಕಡಾ 88 ಕುಟುಂಬಗಳಲ್ಲಿ ವಿಧವಾ ವಿವಾಹಕ್ಕೆ ಅವಕಾಶ ನೀಡುವ ವಾತಾವರಣ ನಿರ್ಮಾಣವಾಗಿದೆ. ಶೇಕಡಾ67 ಮಾಹಿತಿದಾರರ ಪ್ರಕಾರ ವಿಧವೆಯರಿಗೆ ಹಲವು ನಿರ್ಬಂಧಗಳಿವೆ. ಶೇಕಡಾ 9 ಮಾಹಿತಿದಾರರು ನಿರ್ಬಂಧಗಳಿಲ್ಲ ಎಂಬುದಾಗಿ ತಿಳಿಸಿದರೆ 24 ಶೇಕಡಾ ಜನರು ಗೊತ್ತಿಲ್ಲ ಪ್ರಸ್ತುತ ನಗರ ಸಮಾಜದಲ್ಲಿ ಈ ವಿಚಾರದ ಕುರಿತು ತಿಳಿಯಲ್ಪಡುವುದಿಲ್ಲ ಎಂದಿದ್ದಾರೆ.

►ಶೇಕಡಾ 69 ಹುಡುಗಿಯರ ಅಂತರ್ಜಾತೀ ವಿವಾಹಕ್ಕೆ ಕುಟುಂಬಗಳಲ್ಲಿ ವಿರೋದವಿದ್ದು, ಶೇಕಡಾ 5 ಕುಟುಂಬಗಳು ಒಪ್ಪಿಗೆಯನ್ನು ಸೂಚಿಸಿವೆ .ಪ್ರಸ್ತುತ ನಗರ ಪ್ರದೇಶಗಳಿಗೆ ವಲಸೆ ಹೋದಂತಹ ಕುಟುಂಬಗಳಲ್ಲಿ ಶಿಕ್ಷಣವು ಈ ರೀತಿಯ ಬದಲಾವಣೆಗೆ ಕಾರಣವಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಇತರ ಜಾತಿಗಳ ಜನರೊಂದಿಗಿನ ಒಡನಾಟ, ಸ್ತ್ರೀಯರ ಅಧಿಕ ಸಂಖ್ಯಾ ಪ್ರಮಾಣ ಈ ವಿವಾಹಗಳಿಗೆ ಕಾರಣವಾಗಿದೆ. ಅಂತರ್ಜಾತೀಯ ವಿವಾಹಗಳಲ್ಲಿ ಶೇಕಡಾ 87.90 ವಿವಾಹ ಪ್ರಥಮ ತಲೆಮಾರಿಗೆ ಸಂಬಂದಿಸಿದಂತೆಯೇ ನಡೆದಿದೆ. ಆದರೆ ಗಂಡಿನ ವಿಚಾರದಲ್ಲಿ 28 ಶೇಕಡಾ ಜನ ಅಂತರ್ಜಾತೀಯ ವಿವಾಹಕ್ಕೆ ಒಪ್ಪಿಗೆ ಸೂಚಿಸಿದ್ದಾರೆ.

►ಹೆಚ್ಚಿನ ಎಲ್ಲಾ ಕುಟುಂಬಗಳಲ್ಲಿ ಪ್ರಮುಖ ನಿರ್ದಾರ ತಳೆಯುವಲ್ಲಿ ಸ್ತ್ರೀಯರ ಅಭಿಪ್ರಾಯಗಳಿಗೆ ಮನ್ನಣೆಯನ್ನು ನೀಡುತ್ತಿದ್ದು, ಶೇಕಡಾ 99 ಕುಟುಂಬಗಳಲ್ಲಿ ಈ ರೀತಿಯ ಉತ್ತಮ ಸ್ಥಾನಮಾನ ಸ್ತ್ರೀಯರಿಗಿದೆ.

►ವೈಯುಕ್ತಿಕವಾಗಿ ಸ್ತ್ರೀಯರ ಸ್ಥಾನಮಾನಕ್ಕೆ ಸಂಬಂಧಪಟ್ಟ ವಿವಿಧ ವಿಚಾರಗಳಿಗೆ ಪ್ರತಿಕ್ರಿಯಾದಾರರಲ್ಲಿ ಬೆಂಬಲದ ವಿಚಾರವನ್ನು ಪ್ರಶ್ನಿಸಿದಾಗ ವಿಧವಾ ವಿವಾಹಕ್ಕೆ 92.8 ಶೇಕಡಾ ಜನರು ಪ್ರೋತ್ಸಾಹ ನೀಡುವುದಾಗಿಯೂ, ಸ್ತ್ರೀಯರ ಸ್ವಾವಲಂಬನೆಗೆ ಶೇಕಡಾ 96.5 ಕುಟುಂಬಗಳಲ್ಲಿ ಬೆಂಬಲ ವ್ಯಕ್ತವಾಗಿದೆ.

ಸ್ತ್ರೀಯರ ಉನ್ನತ ಶಿಕ್ಷಣಕ್ಕೆ 99 ಶೇಕಡಾ ಜನರು ಬೆಂಬಲವನ್ನು ವ್ಯಕ್ತಪಡಿಸಿದ್ದು, ಅಂತರ್ಜಾತೀಯ ವಿವಾಹಕ್ಕೆ ವಿರೋಧ ವ್ಯಕ್ತಪಡಿಸುವ ಮೂಲಕ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಆದ್ಯತೆಯನ್ನು ನೀಡಿದ್ದಾರೆ. ವರದಕ್ಷಿಣಾ ನಿಷೇದ ಕಾನೂನಿನ ಹೊರತಾಗಿಯೂ ವರದಕ್ಷಿಣೆಯು ಪ್ರಸ್ತುತವಾಗಿಯೂ ಅಸ್ಥಿತ್ವದಲ್ಲಿದೆ.

ಸಲಹೆಗಳು

1. ಸರ್ಕಾರಿ ಉದೋಗಗಳೆಲ್ಲವೂ ಪ್ರವೇಶ ಪರೀಕ್ಷೆಗಳ ಮೂಲಕವೇ ನಡೆಯುವುದರಿಂದ ಮರಾಟಿ ನಾಯ್ಕ್ ಸಮುದಾಯದ ಗ್ರಾಮೀಣ ಭಾಗದ ಜನರ ಪ್ರಗತಿಗಾಗಿ ಸ್ಪರ್ದಾತ್ಮಕ ಪರೀಕ್ಷೆಗಳನ್ನು ಬರೆಯಲು ಉಚಿತ ತರಬೇತಿಗಳನ್ನು ನೀಡಬೇಕು.
2. ನಿರುಧ್ಯೋಗಿಗಳಿಗೆ ಅದರಲ್ಲೂ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಾವಲಂಭಿ ಬದುಕು ನಡೆಸಲು ಆಧುನಿಕ ಸಮಾಜದಲ್ಲಿ ಬೇಡಿಕೆ ಇರುವಂತಹ ಉದ್ಯೋಗಗಳ ಬಗ್ಗೆ ಕೌಶಲ್ಯ, ಪ್ರಾವೀಣ್ಯತೆಗಳ ವೃತ್ತಿ ಶಿಕ್ಷಣ ತರಬೇತಿ ಕೇಂದ್ರಗಳನ್ನು ಬುಡಕಟ್ಟು ಪ್ರದೇಶಗಳಲ್ಲಿ ಸ್ಥಾಪಿಸಿ, ವಿದ್ಯಾವಂತ ಯುವ ಪೀಳೀಗೆಯನ್ನು ಆಧುನಿಕ ಪ್ರಪಂಚಕ್ಕೆ ತಯಾರಿಗೊಳಿಸುವುದು.
3. ಮರಾಟಿ ನಾಯ್ಕ್ ಸಮುದಾಯದಲ್ಲಿ ಸರಕಾರದ ಯೋಜನೆಯು ನಿಜವಾದ ಫಲಾನುಭವಿ ಪಡೆಯುತ್ತಿದ್ದಾನೆಯೇ, ಅದರ ಅನುಷ್ಟಾನ ಪರಿಣಾಮಕಾರಿಯಾಗಿದೆಯೇ ಎಂಬುದನ್ನು ವಿಶ್ಲೇಷಿಸಲು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಧಿಕಾರಿಗಳನ್ನು ಒಳಗೊಂಡ ಗುಪ್ತದಳವನ್ನು ರಚಿಸಿ ಅಬಿವೃದ್ದಿಯಲ್ಲಿ ಆಗುವ ಅಡೆತಡೆಗಳನ್ನು ಪತ್ತೆಹಚ್ಚಿ ನಿವಾರಿಸಬೇಕು.
4. ಅಂತರ್ಜಾತೀಯ ವಿವಾಹಗಳಿಗೆ ಹೆಚ್ಚಿನ ಒತ್ತನ್ನು ನೀಡುವ ಮೂಲಕ ಸಮಾಜದ ವಿವಿಧ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಮಧ್ಯೆ ಇರುವ ಕಂದಕವನ್ನು ಮುಚ್ಚುವ ಕಾಯಿದೆಯನ್ನು ರೂಪುಗೊಳಿಸಬೇಕು.
5. ಮರಾಟಿನಾಯ್ಕ್ ಸಮುದಾಯದವರ ಮೇಲೆ ಮೇಲು ಜಾತಿ ಜನರಿಂದ ನಡೆಯುವ ಶೋಷಣೆ, ದಬ್ಬಾಳಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಯೊಂದು ತಾಲೂಕುಗಳಲ್ಲು ವಿಶೇಷ ಪೋಲಿಸ್ ತಂಡವೊಂದನ್ನು ರಚಿಸಿ ಕುಂದು ಕೊರತೆಗಳನ್ನು ಪತ್ತೆಹಚ್ಚಿ ಪರಿಹರಿಸುವುದು.
6. ಪರಿಶಿಷ್ಟ ಪಂಗಡಗಳಿಗೆ ನೀಡಲ್ಪಟ್ಟ 3 ಶೇಕಡಾ ಮೀಸಲಾತಿಯನ್ನು ಶೇಕಡಾ 7 ಕ್ಕೇರಿಸುವುದು ಮತ್ತು ಸಮುದಾಯದ ಒಳಗಿನ ಬಡವರಿಗಷ್ಟೇ ಅದರ ಪ್ರಯೋಜನ ಸಿಗಲು ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು.

ಉಪಸಂಹಾರ:

ಈ ಅಧ್ಯಯನದಲ್ಲಿ ಸಂಶೋದಕರು ಮರಾಟಿ ನಾಯ್ಕ್ ಸಮುದಾಯದ ಐತಿಹಾಸಿಕ ಹಿನ್ನಲೆ ಯನ್ನು ವಿಶ್ಲೇಷಿಸುವುದರ ಜತೆಗೆ ಸಮುದಾಯದ ಅಧ್ಯಯನಕ್ಕೆ ಸಂಬಂದಪಟ್ಟ ಹಲವು ಸಾಹಿತ್ಯದ ವಿಮರ್ಶೆಯನ್ನು ಮಾಡಿದ್ದಾರೆ.ಅಲ್ಲದೆ ಉದ್ಯೋಗ ಎಂಬ ಪರಿಕಲ್ಪನೆಯನ್ನು ವಿಶಾಲವಾದ ದೃಷ್ಟಿಕೋನದಿಂದ ವಿಮರ್ಶೆಗೆ ಗುರಿಪಡಿಸಿದುದಲ್ಲದೆ,ಜತೆಗೆ ಸಾಮಾಜಿಕ ಚಲನೆ,ಮಹಿಳೆಯರ ಸ್ಥಾನಮಾನ,ಆರೋಗ್ಯ ಸ್ಥಿತಿಗತಿಗಳ ಬಗ್ಗೆಯೂ ಗಮನ ಹರಿಸಲಾಗಿದೆ. ಸಂಶೋದಕರು ಕೆಲವೊಂದು ಪರಿಕಲ್ಪನೆಗಳಾದಂತಹ ಶಿಕ್ಷಣ, ಪಾಶ್ಚಿಮಾತ್ಯೀಕರಣ, ಆಧುನಿಕೀಕರಣ, ಕೈಗಾರಿಕೀಕರಣ, ನಗರೀಕರಣ, ಸಾಂಪ್ರದಾಯಿಕ ಉದ್ಯೋಗ, ಕುಮೇರಿ ಬೇಸಾಯ ಮುಂತಾದವುಗಳು ಪೀಳಿಗೆಯಿಂದ ಪೀಳಿಗೆಗೆ ಬದಲಾದ ಚಿತ್ರಣ ಇವುಗಳ ಬಗ್ಗೆ ಪ್ರತಿಪಾದಿಸಿದ್ದಾರೆ. ಪ್ರಸ್ತುತವಾಗಿ ಈ ಕುಮೇರಿ ಬೇಸಾಯವನ್ನು ಮಾಡುವವರೇ ಇಲ್ಲದೆ ಸಮಾಜದ ಬೆಳವಣಿಗೆಯೊಂದಿಗೆ ಕೃಷಿ ಸಂಬಂದಿ ಚಟುವಟಿಕೆಗಳಲ್ಲಿ ಹೆಚ್ಚಿನ ಜನರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಜತೆಗೆ ಇಂತಹ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವ ಕಾರಣದಿಂದಾಗಿ ತಾವು ಸಾಮಾಜಿಕವಾಗಿ ಕೆಳಮಟ್ಟದಲ್ಲಿ ಗುರುತಿಸಿಕೊಳ್ಳುತ್ತೇವೆಂಬ ಕೀಳರಿಮೆಯ ಭಾವನೆಯಿಂದಾಗಿ ವೇತನ ಕಡಿಮೆಯಿದ್ದರೂ ಕೂಡಾ ನಗರಗಳ ಹಲವು ಖಾಸಗೀಉದ್ಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.ಜತೆಗೆ ಸಾಂಪ್ರಾದಾಯಿಕ ಉದ್ಯೋಗದಲ್ಲಿನ ಅನಾನುಕೂಲತೆಗಳು,ಆಧುನಿಕ ಸಲಕರಣೆಗಳ ಉಪಯೋಗ, ಕೂಲಿ ಕಾರ್ಮಿಕರ ಕೊರತೆ,ಆರ್ಥಿಕ ವ್ಯವಸ್ಥೆಯ ಬದಲಾವಣೆಗಳು, ಆಧುನಿಕ ಅರಣ್ಯ ಕಾಯಿದೆಗಳಿಂದಾಗಿ ಅರಣ್ಯವಾಸಿಗಳಿಗೆ ಕಾಡಿನ ಮೇಲೆ ಇದ್ದ ಹಕ್ಕಿನ ನಿರಾಕರಣೆ ಈ ಸಾಂಪ್ರಾದಾಯಿಕ ಕುಮೇರಿ ಬೇಸಾಯದ ಅವನತಿಗೆ ಕಾರಣವಾಗಿದೆ.

ಮರಾಟಿ ನಾಯ್ಕ್ ಸಮುದಾಯದ ಚಲನೆಯು ಶಿಕ್ಷಣ,ಉದ್ಯೋಗ,ಸಂಸ್ಕೃತಿ,ಧರ್ಮ,ಮತ್ತು ಸರಕಾರ ವ್ಯವಸ್ಥೆಯ ಕೆಲವು ಅಂಶಗಳಾದ ಉದ್ಯೋಗ ಸೇರ್ಪಡೆಯಲ್ಲಿ ಮೀಸಲಾತಿ ಧೋರಣೆ ಇವುಗಳನ್ನು ಅವಲಂಬಿಸಿದೆ.ನಗರೀಕರಣ, ಶಿಕ್ಷಣ,ಮತ್ತು ಖಾಸಗೀ ಹಾಗೂ ಸರಕಾರೀ ಉದ್ಯೋಗಗಳು ಚಲನೆಗೆ ಸಹಕಾರಿಯಾದ ಆಕರ್ಶಿತ ಅಂಶಗಳಾಗಿವೆ, ಈ ಮೂಲಕ ತನ್ನ ಜೀವನದ ದಿನನಿತ್ಯದ ಆಹಾರಗಳಿಕೆಗೆ ವಿವಿಧ ದಿಕ್ಕನ್ನು ತೋರಿಸಿಕೊಡುತ್ತವೆ.ಈ ಎಲ್ಲಾ ಅಂಶಗಳು ಮರಾಟಿ ನಾಯ್ಕ್ ಸಮುದಾಯದ ಜನರು ಆಧುನಿಕ ಉದ್ಯೋಗಗಳ ಕಡೆಗೆ ಮುಖ ಮಾಡುವಂತೆ ಮಾಡಿವೆ.ಔದ್ಯೋಗಿಕ ಚಲನೆಯು ಸಾಮಾಜಿಕ ಚಲನೆಗೆ ಸಹಕಾರಿಯಾದ ಅಂಶವಾಗಿದ್ದು, ಈ ಮೂಲಕ ಸಮಾಜದ ಅಬಿವೃದ್ದಿ ಸಾಧಿತವಾಗಲಿದೆ. ಈ ರೀತಿಯ ಚಲನೆಯಲ್ಲಿ ನಗರ ವ್ಯವಸ್ಥೆಯ ವಿಚಾರವು ಹೆಚ್ಚು ಪ್ರಭಾವಿಯಾಗಿದ್ದು, ಮರಾಟಿ ನಾಯ್ಕ್ ಸಮುದಾಯದ ಔದ್ಯೋಗಿಕ ಚಲನೆಯು ಸಮಾಜದ ಔದ್ಯೋಗಿಕ ಚಲನೆಗೂ ಪ್ರೇರಣೆಯನ್ನೊದಗಿಸುವುದು.

ಆಕರ ಗ್ರಂಥ (Bibiliography)

Books:

1. Abbasayulu, Y. B 1979, “Sociology of Depressed Groups”, Book Links Corporation, Hyderabad.
2. Barker, Bernard, 1968: "*Social Mobility in Hindu India*" in James Silberberg (Ed.) Social Mobility in the Caste System in India: The Hauge, Mouton Publishers
3. Beteille, Andre. 1977: " *Inequality among Man*," Oxford University Press .
4. Bhowmick, P.K., 1969. “Occupational *Mobility and Caste Structure in Bengal”*.Indian Publiations, Calcutta.
5. Bhatia, S.C.1982:" *Education and Socio-cultural Disadvantages*" Xerxes Publication.New Delhi.
6. Bourdieu, P. 1986. “*The forms of capital. Cultural theory: An anthology*”. 81-93.
7. Damle, Y.B., 1968 : "*Reference Group Theory with regare to Mobility in caste"* in James Silberberg (ed.) Social Mobility in Caste System of Mov. in India. The Hague: Publisher.
8. Davidson, P.E. and Dewey Anderson, H., 1937, Occupational – Mobility in anAmerican Community, Standford University Press.
9. Devi S 1999. “*Tradition and Modernity among Indian Women*”. Jaipur, India Pointer Publishers.
10. Dev, P.C. 1975: "*Social Stratification and Mobility in Rural Setting*", Research-Co. Publications, Delhi.
11. Dubey, S.M., 1975, Social Mobility among the Professions: Study of the Professions in a Transitional Indian City, Bombay: Popular Prakashan.
12. Dubey, S.M. 1975: "*Social Mobility among the Professions*", Popular Parkashan, Bombay.
13. Dube and Sachdev, P.S. 1985: "*Mental Health and Problems of Socially Disadvantages*", Tata Mcgraw Hill, New Delhi.
14. Dube, S.C.1958. “India’s Changing Villages”Oxford University press, London.

15. Durkerley, David, 1975, “*Occupations and Society*”. Routledge and Kegan Paul Ltd. Broadway House, Carter Lane, London.
16. Fisherman, A.T. 1941: "*Cultural Change and underprivileged: A study of Madigas in South India under Christian guidance*", Madras.
17. Ghurye, G.S. 1961: *"Caste Class and Occupation"* Popular Publications, Bombay.
18. Ghurye, G.S.1969 “*Caste and Race in India*”, Popular Prakashana, Bombay.
19. Gangadhara Daivajna (2000). “*Budakattu Samaja: Huttu saavina naduve*”. Kannada vishvavidyaalaya. Hampi.
20. Hutton, J H, 1946 *Caste in India: its Nature, function and origin.* Oxford University press, London.
21. Iyyer Anantha Krishna, 1931, The Mysore Tribes and Castes’. Vol. III, Mysore University of Mysore.
22. Jha, M.L. 1973: "*Untouchablity and Education*". Namitha Publication Meerut.
23. Jorapur, P.B., 1979, *Occupational Mobility of Industrial Workers*, Dharwad : Karnatak University.
24. . Kapur Promila (1970) *Changing Status of the working women in India*, vikas publication, Delhi.
25. Lipset, .S.M. and Bendix, R. 1959: "*Social Mobility of Industrial Soceity*", University of California Press, Berkeley.
26. Lakshmi Narayana(1996*) “Saamajika stara vinyasa mattu chalane”.* Gowri prakashana, Bangalore.
27. Lakkappa Gowda (1998). “*Karnatakada Budakattugalu*, Karnataka jaanapada mattu Yakshagana accadamy”. Bengaluru.
28. Majumdar, D.N. 1958: "*Caste and Communication in a Indian Village*", Asia Publishing House, Calcutta.
29. Maithri K. M (1999) *Budakattu Kulakasubugalu*, prasaranga Kannada vishvavidyalaya, Hampi.

30. Nanjundayya, H.V. and Iyer, A.K., 1935, *Mysore Tribes and Caste. Mysore*: Mysore University.

31. Nandu Ram,1988 "*The Mobile Scheduled, Castes*".Hindustan Publishing Corporation, New Delhi

32. Ogburn, W. F. 1966. *Social Change with Respect to Cultural and Original Nature*. Dell Publishing, New York.

33. .Prabhakara A.S.1999. "*Budakattu Badukina Stiytantaragalu*". Kannada vishvavidyaalaya, Hampi.

34. Purushottama Bilimale 1992. "*Shishta Parishishta*" .Madipu Prakashana, Mangalagangothri.

35. Rao, M.S.A. 1970: "*Urban Employment and Occupational Mobility*" in M.S.A. Rao (ed.) *Urbanization and Social Change*, Orient Longman, New Delhi.

36. Ray, B.D. and Maumdar, D.N., 1984, *Tribal Occupational Mobility*, Research India Publication, Calcutta.

37. Sarojini Nayak and Jeevan nair 2005. "*Womens Empowerment in India"*, Pointer publication, Jaipur.

38. Stein, Burton 1968. "*Social Mobility and Medieval South Indian Hindu Sects*" in James Silverberg (ed.) Social Mobility in the Caste in India. The Hague, Mouton Publishers.

39. Singh, Kamal 1968: "*Mobility in the Caste System*" in Milton Singer and B.S. Cohn (eds.) Structure and Change in Indian Society, Chicago,Alldine Publishing Co.

40. Singh, Yogendra 1973: "*Modernization of Indian Tradition - A systematic Study of Social Change"*. Thomson Publishers,Delhi

41. Sinha, Sachindanand. 1977: *"The Harijan Elite: A Study of their status, Mobility and Role in Social Transformation*," Thompson Press, New Delhi .

42. Sharma. K.L. 1994: "*Social Stratification and Mobility*", Rawat Publications, Jaipur.

43. Sharma, K.L. 1996 : "*Social Mobility among the scheduled caste* " M.D. Publication Pvt. Ltd., New Delhi.
44. Srinivas, M.N. 1968 : "*Mobility in the caste system*" in Singer and Cohn. Structure and change in Indian Society. Aldine Publishing Company,Chicago.
45. Stanley Eugene 1970. "*Planning Occupational Education and Training for Development"*. New Delhi India, Orient Longman.
46. Simha R.N1999 *Scheduled castes and Scheduled Tribes(Prohibition of Transfer of Certain Lands) Act and rules in Karnataka* Shree ambika publication,Bangalore.
47. Singh, Yogendra. 1997: "Social Stratification and change in India," Manohar, New Delhi.
48. Smeller Neil, J. and Lipset,Martin Seymoul, 1970, "Social structure, mobility and development" Routledge and Kegan Paul Ltd. London.
49. Sorokin, P.A., 1927, Social and Cultural Mobility. Harper and Brothers, p. 43.
50. Sorokin, P.A., 1964, Social and Cultural Mobility The Free Press, New York.
51. Sorokin, P. A 1928."*Contemporary Sociological theories*", Harper and Row Publishers, New York.
52. Sharma. K.L. 1994: "Social Stratification and Mobility", Rawat Publications, Jaipur.
53. Sharma, K. L 1974. *The Changing Rural Stratification System.*Orient Longman Ltd., New D elhi-1.
54. Srinivas, M.N. 1968: "Mobility in the caste system" in Singer and Cohn. Structure and change in Indian Society. Aldine Publishing Company,Chicago.
55. Srinivas, M. N. 1952,"*Religion and Society among the Coorgs of South India*", Oxford University Press, Londan.

56. Srinivas, M.N, 1972.“*Social Change in Modern India,*” Jaj Press, New Delhi.

57. Srinivas, M.N. 1968:"Religion and Society among Coorgs". Asian Publishing House, Newyork.

58. Stein, Burton 1968: "Social Mobility and Medieval South Indian Hindu Sects" in James Silverberg (ed.) Social Mobility in the Caste in India. The Hague, Mouton Publishers.

59. Stuart, H.V., 1988, *Caste and Tribes of South India*. Bombay : Oxford Publication .

60. Sundar Naik 2008. “*Karaavali Karnatakada Marati Janaanga Parampare mattu Adhunikathe*”. Deepa priya publication, Bengaluru.

61. Thurston,E. 1975 “*Castes and Tribes of Southern India”*, Madras Govt. Press, Cosmo publication. Delhi.

62. Umamohan, Ch. 1983:"Occupational Mobility". Doctoral Thesis submitted to Osmania University, Hyderbad

Journals:

63. Ambagudia Jagannath, (2007). *Detecting Discrimination: Discourse of preferential treatment for Scheduled Tribe in India,* Social Action no: 57,Vol: 3.

64. Anjali chakravarty, (2012),“*Studying social mobility of the tribal and non tribal people in assam”, IJCAES basic, applied and social sciences*

65. Ashok Kumar H and Mahesh,(2014) *Tribal women and PRI s: A study of Mysore district, Karnataka,* International Journal of Humanities and Social Science Invention, Vol: 3, Issue: 1, January .

66. Bipin jogo (2013). “Decline of Ashram schools in central and eastern India: Impact on Education of ST children”, Social change, Vole: 43.no.3 september.

67. Bali. Neeraj (2018). "*Health Insurance (Mediclaims): Most Important Criteria Considered by customers for deciding to buy Health Insurance in India". International Journal of Multidisciplinary Educational Research* Vol:7. Issue 4(1) April.

68. Desai Sonalde and Veena Kulkarni (2014). *Changing Educational Inequalities in India in the Context of Affirmative Action.* International Journal of Research in Humanities, Arts and Literature Vol. 2, Issue 4, Apr.

69. Giddannanavar Fakkirappa H (2016) *Occupational mobility among the madigas in Karnataka: A socio-political study. International Research Journal of Social Sciences* Volume – 6, Issue -5, June.

70. Irshad A.W, Ahrar A.H, Zuber S.M, (2013). "*Revisiting social stratification in Indian Society :A review and analysis with focus on Kashmir Society."* International Journal of Humanities and social science Invention, Vol:2 . Issue:12, December.

71. Igben Jomata Lucky (2014).*Demographic Correlates of Occupational Mobility of the Rural Labour Force in Delta State, Nigeria. International Journal of Research in Humanities and Social Studies.* Volume 1. Issue 1. November.

72. Jyothi, Dhruva B. (2013). "Occupational mobility among Havyak Brahmins:A case study of Yellapur taluk of Karnataka".*International Journal of Scientific Research,*January,Vol:2,Issue:1.

73. Jogin Parashuram B.(2014) "Professional Education Among; Scheduled Tribes; Sociological Analysis." *International Research Journal of Social Sciences,* Vol. 3(11), November.

74. Kapadia, K.M., 1964, The Passing of the Traditional Society quoted fromJayanth Sankar, Occupational Mobility Aong Kumbara of Mysore City.Man in India, Vol. 53, No. 1.

75. Kajekar, Duggappa (2015). “Problems of Tribal development in coastalKarnataka.” *International journalsof Interdisciplinary and Multidiciplinary studies*. Vol:2, No:9.

76. Kumar Satyan.(2013). “Study of elected tribal women representatives in Panchayat raj institutions in India:A case study ofjharkhand”.Vol:1.Issue:4,November .

77. Kumar Ashok H and Mahesh,(2014). *Tribal women and PRI s: A study of Mysore district, Karnataka,* International Journal of Humanities and Social Science Invention, Vol: 3, Issue: 1, January .

78. Malli Gandhi, (2015), “*Problems of education among Scheduled caste, Scheduled tribes, Backward classes and minority children: opportunities and challenges*. Man in India Oct-Dec.

79. Majumdar Rajashri (2012).*Intergenerational Mobility in Education and Occupational Attainment: A comparative study of Social classes in India.*

80. Mahadevaiah. (2016). “Tribal women participation in politics: A study in Hunsur taluk Karnataka.” *Social sciences international Research Journal*, Vol: 2, Issue:1.

81. Pais, Richarad. (2007). ‘Reservation and social Mobility a Caste Study of Scheduled castes’. *Social Science Gazetteer*. Vol 2-3, 2007-08.

82. Puttaraju, (2016)“*Constitutional provisions and Draft national policy for tribal development in India”,* Journal of Development and social change, January to march.

83. Pulla Navya Rani,(2018). "Educational contribution of Dr.B.R.Ambedkar*". IJMER*, Vol: 7, Issue 4(1),April .

84. Pujar A, Hoogar p, Basavanagowda (2016)."*An Assessment of Nutritional Status among Jenukuruba Tribe of Kodagu District*". Journal of Community Medicine and Health Education. vol:6,Issue:5.

85. Ramakrishnappa D.C(2015) Empowerment of the Tribal women in Karnataka in present Social Order: A sociological analysis, *International Journal of Academic Research* Vol: 2, Issue: 4(1), October-December.

86. *Savatikar N.R(2014). "Perception Regarding Conversion and Social Change Among Scheduled Tribes" .The International Journal of Social Sciences and Humanities Invention* Volume 1.

87. Savatikar N.R. (2014). *Problems of Education among Scheduled Tribe P.G. Students in Karnataka.* International Journal of innovative research and development. Vol 3, Issue 5. May

88. Santhakumari, R (1976), "*Impact of welfare measures on the backward classes, a study of the scheduled castes of Kerala*, Ph D thesis, Kerala University, Trivandrum.

89. Seenivasa K.N, (2013) *Occupational Mobility among the Kuruba's in Karnataka: a sociological study,* International journal of Humanities and social science invention.

90. Tame Ramya,(2014) *Socio- Economic Status and Associate Problems of the Tribal's: A case Study of a Village in Kurung Kumey District of Arunachal Pradesh,* An International Journal of Humanities and Social Sciences Vol:1, Issue:2, September.

91. Virginus Xaxa (*1999) Tribes as Indigenous People of India,* Economic and Political Weekly, December 18.

Reports:

92. L.M, Shrikant. Report of the Commissioner for scheduled Castes and Scheduled Tribe 1956-57 (Sixth Report).New Delhi: The Manager of Publications.

93. Anil,T.(2016). Interrogating the Role of State and Understanding Social Mobility among Manual Scavengers in India. Social Action,66(3),277.

94. Havanur L.G.KarnatakaBacwardclass Commission Report1975

95. K.Abhishanker,KarnatakaStateGazette-SouthCanaraDistict,1973.

E-Sources:

96. **http://hdl.handdle.net/10603/14988.**

97. **www.confabjournals.com/confabjourals/images/622013753241.**

98. http://mpra.ub.uni-muenchen.de/28539.

99. http://hdl.handdle.net/10603/202652

100. http://hdl.handdle.net/10603/127361

101. http://hdl.handdle.net/10603/51233

102. http://hdl.handdle.net/10603/131582

103. http://hdl.handdle.net/10603/96508

Research Scholar **Research Guide**

Sandeep Kumar B.K **Dr. Govinda Raju B.M**